ಐಕ್ಯರಂಗ

ದುಡಿವ ಜನರ ಪ್ರಾಣ ಮಿತ್ರ


ವಿಶೇಷ ಸಂಚಿಕೆ

ಜೂನ್ 2003 ಬೆಲೆ ರೂ. 5.00

ಗ್ರಾಮೀಣ ಕೃಪಾಂಕ: ಮುಂದೇನು ?



ಇದು ಅಳಿವು ಉಳಿವಿನ ಹೋರಾಟ...
ಆತ್ಮವಿಶ್ವಾಸದ ಹೋರಾಟ...





ಸಂವಿಧಾನ ತಿದ್ದುಪಡಿಯೊಂದೇ ಶಾಶ್ವತ ಪರಿಹಾರ

13270 ನೌಕರರ ನೆತ್ತಿಯ ಮೇಲೆ ತೂಗುತ್ತಿರುವ ಕತ್ತಿ
ಸಂವಿಧಾನದ 31(ಬಿ) ಅಡಿ ಶಾಸನವೊಂದೇ ದಾರಿ

ಗ್ರಾಮಾಂತರ ಕೃಪಾಂಕ ಸೌಲಭ್ಯದ ಹಿನ್ನೆಲೆ

ಸ್ವಾತಂತ್ರ್ಯಾನಂತರದ ಭಾರತದ ಬೆಳವಣಿಗೆಯ ಹಾದಿ, ಅದಕ್ಕೂ ಪೂರ್ವವಾಗಿ ಆಂಗ್ಲರ ಆಡಳಿತದಿಂದಲೂ 'ನಗರ ಕೇಂದ್ರಿತ' ಬೆಳವಣಿಗೆಯೂ ಭಾರತದ ಉದ್ದಗಲಕ್ಕೂ ನಗರ ಹಾಗೂ ಗ್ರಾಮೀಣ ಪ್ರದೇಶದ ನಡುವೆ ದೊಡ್ಡ ಅಂತರವನ್ನು ಸೃಷ್ಟಿಸಿತು. ಕೈಗಾರೀಕರಣ ಹಾಗೂ ಅದರ ಹಿಂದಿನ ಬಂಡವಾಳಶಾಹಿ ಹಿತಾಸಕ್ತಿಗಳು ಅಭಿವೃದ್ಧಿಯನ್ನು ಕೇವಲ 'ನಗರ ಕೇಂದ್ರಿತ'ವಾಗಿಯೆ ನಡೆಯುವಂತೆ ನೋಡಿಕೊಂಡವು. ಇದರೊಂದಿಗೆ ಅದಕ್ಕೆ ಪೂರಕವಾದ ಶೈಕ್ಷಣಿಕ-ಸಾಂಸ್ಕೃತಿಕ ಬೆಳವಣಿಗೆಗಳೆಲ್ಲವೂ ನಗರ ಕೇಂದ್ರಿತವಾಗಿಯೆ ರೂಪಿತಗೊಂಡವು. ಶೈಕ್ಷಣಿಕ ಮೂಲ ಸೌಕರ್ಯಗಳನ್ನು ಗ್ರಾಮಾಂತರ ಪ್ರದೇಶಗಳಿಗೆ ವಿಸ್ತರಿಸುವಲ್ಲಿ ರಾಷ್ಟ್ರ ಹಾಗೂ ಕರ್ನಾಟಕ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಸರ್ಕಾರಗಳು ವಿಫಲವಾಗಿವೆ ಎಂಬ ಅಂಶವನ್ನು ಗ್ರಾಮಾಂತರ ಪ್ರದೇಶಗಳಲ್ಲಿನ ವಾಸ್ತವತೆ ಎತ್ತಿತೋರುತ್ತದೆ.

ಇಂತಹ ಶೈಕ್ಷಣಿಕ ಮೂಲ ಸೌಕರ್ಯಗಳಲ್ಲಿನ ಅಗಾಧ ಅಂತರವು ಉನ್ನತ ಶಿಕ್ಷಣ ಹಾಗೂ ಉದ್ಯೋಗದಲ್ಲಿನ ಅವಕಾಶಗಳನ್ನು ಬಹುಪಾಲು ನಗರ ಕೇಂದ್ರಿತ ವಿದ್ಯಾರ್ಥಿಗಳಿಗೆ ಸೀಮಿತಗೊಳಿಸಿತು. ಇದರಿಂದಾಗಿ ದೊಡ್ಡ ರೀತಿಯ ಅಸಮಾಧಾನ ಗ್ರಾಮಾಂತರ ಪ್ರದೇಶಗಳಲ್ಲಿ ಮೂಡತೊಡಗಿದ್ದನ್ನು ಅರಿತ ರಾಜ್ಯ ಸರ್ಕಾರಗಳು, ದಶಕಗಳ ಬಂಡವಾಳಶಾಹಿ ಬೆಳವಣಿಗೆ ಆಧಾರಿತ ಅಭಿವೃದ್ಧಿಯಿಂದ ಗ್ರಾಮಾಂತರ ಪ್ರದೇಶಗಳಿಗೆ ಆದ ಅನ್ಯಾಯವನ್ನು ಸರಿಪಡಿಸುವ ನೆಪದಲ್ಲಿ ತುರ್ತು ಚಿಕಿತ್ಸೆಯಂತೆ 'ಗ್ರಾಮಾಂತರ ಕೃಪಾಂಕ' ವನ್ನು ಕನಿಷ್ಟ 10 ವರ್ಷ ಗ್ರಾಮಾಂತರ ಪ್ರದೇಶಗಳಲ್ಲಿ ಅಭ್ಯಾಸ ಮಾಡಿದ 'ಗ್ರಾಮಾಂತರ ಅಭ್ಯರ್ಥಿಗಳಿಗೆ' ನೀಡಲು ಮುಂದಾದವು.

1975 ರ ಮುನ್ನ ಉತ್ತರ ಪ್ರದೇಶ ರಾಜ್ಯ ಸರ್ಕಾರ ಗ್ರಾಮಾಂತರ ಪ್ರದೇಶ, ಗುಡ್ಡಗಾಡು ಪ್ರದೇಶ ಹಾಗೂ ಉತ್ತರ ಖಂಡ ಪ್ರದೇಶದ ಅಭ್ಯರ್ಥಿಗಳ ಪರವಾಗಿ ಮೀಸಲಾತಿ, ಮಹಾರಾಷ್ಟ್ರ ರಾಜ್ಯ ಸರ್ಕಾರ 1982 ರ ಮುನ್ನ ಉದ್ಯೋಗದಲ್ಲಿ ಗ್ರಾಮಾಂತರ ಕೃಪಾಂಕ ಹಾಗೂ ಹರಿಯಾಣ ರಾಜ್ಯ ಸರ್ಕಾರ 1984 ರ ಮುನ್ನ ವೃತ್ತಿಪರ ಕಾಲೇಜುಗಳಿಗೆ ಪ್ರವೇಶದಲ್ಲಿ ಗ್ರಾಮಾಂತರ ಕೃಪಾಂಕ ನೀಡುವ ಅವಕಾಶ ಕಲ್ಪಿಸಿದ್ದವು. ಈ ನಿಟ್ಟಿನಲ್ಲಿ 1993 ರಲ್ಲಿ ಕರ್ನಾಟಕ ರಾಜ್ಯ ಸರ್ಕಾರವು ಗ್ರಾಮಾಂತರ ಕೃಪಾಂಕ ಸೌಲಭ್ಯವನ್ನು ಕಲ್ಪಿಸಿತು.

ಕರ್ನಾಟಕ ರಾಜ್ಯ ಸರ್ಕಾರವು ಸಂವಿಧಾನಾತ್ಮಕವಾಗಿ ಸಂವಿಧಾನ ಪರಿಚ್ಛೇದ 187(2), 229 ಮತ್ತು 309 ಹಾಗೂ 7ನೇ ಶೆಡ್ಯೂಲ್‌ನ 2ನೇ ಪಟ್ಟಿಯ 3 ಮತ್ತು 41 ರ ಅನ್ವಯ ಇರುವ ಅಧಿಕಾರದಡಿ 1978 ರ 'ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ'ವನ್ನು ಶಾಸನ ಮಾಡಿತು. ಈ ಅಧಿನಿಯಮದ ಕಲಂ 8 ರಾಜ್ಯ ಸರ್ಕಾರಕ್ಕೆ ನಿಯಮಗಳನ್ನು ರೂಪಿಸಲು, ರೂಪಿಸಿದ ನಿಯಮಗಳನ್ನು ರಾಜ್ಯ ಶಾಸನ ಸಭೆಯಲ್ಲಿ ಮಂಡಿಸಿ, ಅಂಗೀಕರಿಸಲ್ಪಟ್ಟಂತೆ ಜಾರಿಗೆ ತರುವಂತೆ ಅಧಿಕಾರ ನೀಡಿದೆ.

ಈ ನಿಟ್ಟಿನಲ್ಲಿ ಅಧಿನಿಮಯದ ಕಲಂ 3 ರ ಅಡಿ ರಾಜ್ಯ ಸರ್ಕಾರಕ್ಕಿರುವ ಅಧಿಕಾರ ಬಳಸಿ ಕರ್ನಾಟಕ ನಾಗರೀಕ ಸೇವಾ(ಸಾಮಾನ್ಯ ನೇಮಕಾತಿ (43ನೇ ತಿದ್ದುಪಡಿ) ನಿಯಮಗಳು)-1993 ರನ್ನು ಸರ್ಕಾರ ಅಂಗೀಕರಿಸಿತು. ಈ ತಿದ್ದುಪಡಿ ಮೂಲಕ ನಿಯಮ 2(1) ಕ್ಕೆ ಉಪನಿಯಮ (MM) ಅನ್ನು ಸೇರಿಸುವ ಮೂಲಕ 'ಗ್ರಾಮಾಂತರ ಅಭ್ಯರ್ಥಿ'ಯನ್ನು ಪರಿಭಾಷಿಸ ಲಾಯಿತು. ಹಾಗೂ ಸ್ವತಂತ್ರ ನಿಯಮ '3B'ಯನ್ನು ಸೇರ್ಪಡೆ ಮಾಡುವ ಮೂಲಕ ಸಾರ್ವಜನಿಕ ನೇಮಕಾತಿಯಲ್ಲಿ 'ಕೃಪಾಂಕ' ಸೌಲಭ್ಯವನ್ನು ಗ್ರಾಮಾಂತರ ಅಭ್ಯರ್ಥಿಗಳಿಗೆ ಕಲ್ಪಿಸಲಾಯಿತು. ಇದರನ್ವಯ 1994 ಜೂನ್ 15 ಸರ್ಕಾರಿ ಆಜ್ಞೆ ಮೂಲಕ ಶೇ. 5 ರಷ್ಟು ಅಂಕಗಳನ್ನು ಗ್ರಾಮಾಂತರ ಅಭ್ಯರ್ಥಿಗಳಿಗೆ ನೀಡಲಾಯಿತು. ನಂತರದ ದಿನಗಳಲ್ಲಿ ಮೇಲಿನ ನಿಯಮಾವಳಿಗಳನ್ನು 1996 ರ 47ನೇ ತಿದ್ದುಪಡಿ ಹಾಗೂ 1997 ರ 49 ರ ತಿದ್ದುಪಡಿಗಳ ಮೂಲಕ ನಿಯಮ 2 ಹಾಗೂ ನಿಯಮ 3B ಗಳಿಗೆ ತಿದ್ದುಪಡಿ ತಂದು, ಗ್ರಾಮಾಂತರ ಕೃಪಾಂಕ ಸೌಲಭ್ಯವನ್ನು ಗ್ರೂಪ್ ABC ಹಾಗೂ D ಗಳಿಗೆ ಹಾಗೂ ಕೃಪಾಂಕದ ಶೇಕಡಾವಾರನ್ನು ಶೇ 5 ರಿಂದ ಶೇ 10 ಕ್ಕೆ ಏರಿಸಲಾಯಿತು. ಅನಂತರ ಪ್ರಸಕ್ತ ನಿಯಮಾವಳಿಗಳಿಗೆ 1997 ರ 50ನೇ ತಿದ್ದುಪಡಿ ಮೂಲಕ 'ಗ್ರಾಮಾಂತರ ಅಭ್ಯರ್ಥಿ'ಯ ಪರಿಭಾಷೆಗೆ ತಿದ್ದುಪಡಿ ತಂದು 1961 ರ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯ್ದೆಯಡಿ 1ನೇ ತರಗತಿಯಿಂದ ಅರ್ಹತಾ ಪರೀಕ್ಷೆವರೆಗೆ ಅಥವಾ 10 ನೇ ತರಗತಿಯವರೆಗೆ ನಿಯಮವಾಳಿಗಳು ಪಟ್ಟಿ ಮಾಡಿರುವ ನಗರಗಳು ಅಥವಾ ಪ್ರದೇಶಗಳ್ನು ಹೊರತುಪಡಿಸಿದ ಪ್ರದೇಶಗಳಲ್ಲಿನ ಶಾಲೆಗಳಲ್ಲಿ ಓದಿದ ವಿದ್ಯಾರ್ಥಿಗಳೆಲ್ಲರನ್ನು ಇದರ ವ್ಯಾಪ್ತಿಗೆ ತರಲಾಯಿತು.

ಈ ರೀತಿಯಲ್ಲಿ ಶಿಕ್ಷಣ ಹಾಗೂ ಉದ್ಯೋಗಗಳಲ್ಲಿ ಗ್ರಾಮಾಂತರ ಅಭ್ಯರ್ಥಿಗಳಿಗೆ ಶೇ 10 ರಷ್ಟು ಕೃಪಾಂಕದ ಸೌಲಭ್ಯವನ್ನು ರಾಜ್ಯ ಸರ್ಕಾರ ಒದಗಿಸಿತು. 1998 ರಲ್ಲಿ ಕೆಪಿಎಸ್‌ಸಿ ಪರೀಕ್ಷೆ ತೆಗೆದುಕೊಂಡಿದ್ದ ಧಾರವಾಡದ ಬಸವರಾಜ್ ನಾಗೂರು ಎಂಬವರೊಬ್ಬರ ರಿಟ್ ಅರ್ಜಿಯನ್ನು ಅಂಗೀಕರಿಸಿದ ರಾಜ್ಯ ಉಚ್ಚ ನ್ಯಾಯಾಲಯವು ಉದ್ಯೋಗವಕಾಶಗಳಲ್ಲಿ ಕೃಪಾಂಕ ನೀಡುವುದನ್ನು ಅಸಿಂಧು ಎಂದು ಘೋಷಿಸಿ ರದ್ದುಗೊಳಿಸಿತು.

ಗ್ರಾಮೀಣ ಕೃಪಾಂಕ ಮುಂದುವರಿಕೆಗಾಗಿ ಒತ್ತಾಯಿಸಿ ವಿದ್ಯಾರ್ಥಿ ಯುವಜನರ ಬೃಹತ್ ರ್‍ಯಾಲಿ - 2000



ಕೃಪಾಂಕ ಕೇಳಿದವರಿಗೆ ಲಾಠಿ ಏಟು – ಬಂಧನ

ಇದುವೇ ರಾಜ್ಯ ಸರ್ಕಾರ ಬದ್ಧತೆ?


ಕೃಪಾಂಕ ವಂಚಿತ 13,270 ನೌಕರರ ಬದುಕು ರಕ್ಷಿಸಲು ಸರ್ಕಾರ ಕಟಿಬದ್ಧವಾಗಿ ಅದಕ್ಕಾಗಿ ಸಾಧ್ಯವಿರುವ ಎಲ್ಲವನ್ನೂ ಮಾಡುವುದಾಗಿ ರಾಜ್ಯ ಕಾಂಗ್ರೆಸ್ ಸರಕಾರ ಸಾರುತ್ತಿದೆ. ರಾಜ್ಯದ ಜನತೆ-ವಿದ್ಯಾರ್ಥಿ-ಯುವಜನರಿಗೆ ಈ ಸರ್ಕಾರ ಏನೂ ಹೇಳಿದರೂ ನಂಬಿಕೆ ಕಡಿಮೆಯೇ. ಹಿಂದೆ ಗ್ರಾಮಾಂತರ ಕೃಪಾಂಕ ಮುಂದುವರಿಸಲು ಸಂವಿಧಾನ ತಿದ್ದುಪಡಿಗಾಗಿ ಒತ್ತಾಯಿಸಿ ರಾಜ್ಯದ ವಿದ್ಯಾರ್ಥಿ-ಯುವಜನ ಎಸ್.ಎಫ್.ಐ-ಡಿ.ವೈ.ಎಫ್.ಐ ನೇತೃತ್ವದಲ್ಲಿ ಚಳುವಳಿ ನಡೆಸಿದಾಗ, ಸರ್ಕಾರ ವಿದ್ಯಾರ್ಥಿ ಯುವಜನರನ್ನು ನಡೆಸಿಕೊಂಡ ರೀತಿ ಇನ್ನೂ ಜನಮನದಲ್ಲಿ ಹಸಿಯಾಗಿದೆ.

ಗದಗ್ ಜಿಲ್ಲೆ ರೋಣ ತಾಲ್ಲೂಕಿನ ಒಂದು ... ಗಜೇಂದ್ರಗಡ. ಸುತ್ತಮುತ್ತಲ ಪ್ರದೇಶಕ್ಕೆ ಶಿಕ್ಷಣ ಕೇಂದ್ರ ಹಾಗೂ ವ್ಯಾಪಾರಿ ಕೇಂದ್ರವೂ ಹೌದು. ಫೆಬ್ರವರಿ 25, 2000 ರಂದು ಎಸ್.ಎಫ್.ಐ - ಡಿ.ವೈ.ಎಫ್.ಐ ರಾಜ್ಯ ಸಮಿತಿಗಳ ಕರೆಯ ಮೇರೆಗೆ ವಿದ್ಯಾರ್ಥಿ ಯುವಜನ ಗಜೇಂದ್ರಗಡದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ರಸ್ತೆ ತಡೆ ನಡೆಸಿದಾಗ ಗ್ರಾಮೀಣ ಜನತೆಯ ಪರವಾಗಿ ದೊಡ್ಡ ದೊಡ್ಡ ಮಾತನಾಡುವ ಸರಕಾರ ಮಾಡಿದ್ದೇನು? ಸ್ಥಳೀಯ ಪೋಲೀಸ್ ಅಧಿಕಾರಿಗಳು ವಿದ್ಯಾರ್ಥಿ ಯುವಜನರ ಪ್ರಜಾಸತ್ತಾತ್ಮಕ ಹಕ್ಕನ್ನೇ ಕಸಿದುಕೊಂಡು ಚಳುವಳಿ ಹತ್ತಿಕ್ಕಲು ಯತ್ನಿಸಿದರು- ವಿದ್ಯಾರ್ಥಿಗಳು ಪ್ರತಿಭಟಿಸಿ ರಸ್ತೆತಡೆ ಮುಂದುವರೆಸಿದರು. ... ವಿದ್ಯಾರ್ಥಿ- ಯುವಜನರ ಮೇಲೆ ಲಾಠಿ ಪ್ರಹಾರದ ದಮನ ಚಕ್ರ ಉರುಳಲಾರಂಭಿಸಿತು, ವಿದ್ಯಾರ್ಥಿಗಳು ಯುವಜನರು, ಸುತ್ತಮುತ್ತ ಘಟನೆಯನ್ನು ನೋಡುತ್ತಾ ನಿಂತಿದ್ದ ಅಮಾಯಕ ರೈತರು ಒಟ್ಟಾರೆ 47 ಮಂದಿಯನ್ನು ಬಂಧಿಸಲಾಯಿತು. ಕ್ರಿಮಿನಲ್ ಅಪರಾಧಿಗಳಿಗಿಂತಲೂ ತೀವ್ರವಾದ ಮೊಕದ್ದಮೆಗಳನ್ನು ಹೂಡಿ ಅವರನ್ನು ಜೈಲಿಗಟ್ಟಲಾಯಿತು. ಮನೆಗೆ ಧಾಳಿ-ಕುಟುಂಬ ವರ್ಗದವರಿಗೆ ಬೆದರಿಕೆಗಳೂ ನಡೆದವು.

ಅವಕಾಶವಂಚಿತ ಗ್ರಾಮೀಣ ಜನತೆಯ ನೋವಿಗೆ ಸ್ಪಂಧಿಸುವ ವಿಧಾನವೇ ಇದು. ಇದು ಕೇವಲ ಸ್ಥಳೀಯ ಪೋಲೀಸ್ ಅಧಿಕಾರಿಗಳ ಸೇಡು-ಉದ್ರೇಕದ ನಡವಳಿಕೆಯಲ್ಲ ಎಸ್.ಎಫ್.ಐ-ಡಿ.ವೈ.ಎಫ್.ಐ ನಿಯೋಗ ರಾಜ್ಯದ ಗೃಹಮಂತ್ರಿಗಳು, ಜಿಲ್ಲಾ ಉಸ್ತುವಾರಿ ಮಂತ್ರಿಗಳನ್ನು ಕಂಡು ,ಪರಿಸ್ಥಿತಿಯನ್ನು ವಿವರಿಸಿತು, ಪರಿಣಾಮ ಏನಾಯಿತು.

ಗಜೇಂದ್ರಗಡ ಸಂಗಾತಿಗಳೂ ಇಂದಿಗೂ ಕೋರ್ಟಿಗೆ ಅಲೆದಾಡುತ್ತಿದ್ದಾರೆ. ಆದ... ಎದೆಗುಂದಿಲ್ಲ. ದಮನ ಚಕ್ರಕ್ಕೆ ಗುರಿಯಾ... ಚಳುವಳಿ ಹಿಂದೆ ಸರಿಯಲಿಲ್ಲ. ಬದಲಿಗೆ ಮತ್ತ... ಶಕ್ತಿಯೊಂದಿಗೆ ಎಂದಿಗಿಂತ ಹುರುಪಿನೊಂದಿ... ವಿದ್ಯಾರ್ಥಿ ಯುವಜನ ಚಳುವ... ಮುಂದುವರಿದಿದೆ. ಆದರೆ ಮುಖ್ಯವಾದ ಪ್ರಶ್ನೆ ಇ... ಸರ್ಕಾರದ ಬದ್ಧತೆ ಏನು ಎಂಬುದು? ಸರ್ಕಾ... ಯಾರ ಪರವಾಗಿದೆ? ಯಾವುದರ ಪರವಾಗಿದೆ...

- ಆರ್.ರಾಮಕೃ...




"ಯಾವ ಶಿಕ್ಷಣ ಪದ್ಧತಿ ಹುಡುಗರನ್ನು ಮತ್ತು ಹುಡುಗಿಯರನ್ನು ಸಾಮಾಜಿಕ ಕೆಡುಕುಗಳ ಅಥವಾ ಇತರ ಕೆಡುಕುಗಳ ವಿರುದ್ಧ ಹೋರಾಡುವಂತೆ ಸಿದ್ಧಗೊಳಿಸುವುದಿಲ್ಲವೋ ಆ ಶಿಕ್ಷಣ ಪದ್ಧತಿಯಲ್ಲಿ ಮೂಲಭೂತವಾಗಿ ಏನೋ ದೋಷವಿದೆ"

- ಮಹಾತ್ಮ ಗಾಂಧಿ

ಇದು ಅಳಿವು ಉಳಿವಿನ ಹೋರಾಟ... ಆತ್ಮವಿಶ್ವಾಸದ ಹೋರಾಟ....

1998-99 ರಲ್ಲಿ ಗ್ರಾಮೀಣ ಕೃಪಾಂಕ ಆಧಾರಿತವಾಗಿ ನೇಮಕಗೊಂಡಿದ್ದ 13,270 ನೌಕರರನ್ನು ಸೇವೆಯಿಂದ ತೆರವುಗೊಳಿಸಬೇಕೆಂಬ 2003 ಮೇ 6 ರ ಸುಪ್ರಿಂ ಕೋರ್ಟ್ ಆದೇಶವು ನೌಕರರು ಹಾಗೂ ಇಡೀ ರಾಜ್ಯದ ಜನತೆಗೆ ಬರ ಸಿಡಿಲಿನಂತೆ ಬಂದೆರಗಿದೆ. ಸುಪ್ರಿಂ ಕೋರ್ಟ್ ಆದೇಶದನ್ವಯ 2003 ಜುಲೈ 5ರೊಳಗೆ ರಾಜ್ಯ



ಸರ್ಕಾರವು 13,270 ನೌಕರರನ್ನು ಸೇವೆಯಿಂದ ಬಿಡುಗಡೆ ಮಾಡಬೇಕಿದೆ. ಈ ಕುರಿತು ರಾಜ್ಯ ಸರ್ಕಾರವು ನೌಕರರನ್ನು ರಕ್ಷಿಸಲು ಅಗತ್ಯ ಶಾಸನ ರೂಪಿಸಬೇಕೆ? ಸುಗ್ರೀವಾಜ್ಞೆ ಹೊರಡಿಸಬೇಕೆ? ಸಂವಿಧಾನ ತಿದ್ದುಪಡಿಗೆ ಒತ್ತಾಯಿಸಬೇಕೆ? ಅಥವಾ ನೌಕರರನ್ನು ಒಂದು ದಿನದ ಮಟ್ಟಿಗೆ ಬಿಡುಗಡೆ ಮಾಡಿ, ಮತ್ತೆ ಅವರನ್ನು ಗುತ್ತಿಗೆ ಆಧಾರಿತವಾಗಿ ನೇಮಕ ಮಾಡಿಕೊಳ್ಳಬೇಕೆ? ಎಂಬ ಚಿಂತನೆಯನ್ನು ನಡೆಸಿದೆ ಎಂದು ಹೇಳುತ್ತಿದೆ. ಸುಪ್ರಿಂ ಕೋರ್ಟ್ ಆದೇಶದನ್ವಯ ಅವರನ್ನು ಬಿಡುಗಡೆ ಮಾಡಿ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳದೆ ಅನ್ಯ ಮಾರ್ಗವಿಲ್ಲ! ಎಂಬ ಅಭಿಪ್ರಾಯವು ಹೆಚ್ಚು ಕೇಳಿಬರುತ್ತಿದೆ.

ಈ ಹಿನ್ನೆಲೆಯಲ್ಲಿ 13,270 ನೌಕರರನ್ನು ರಕ್ಷಿಸಲು ಸಂವಿಧಾನದ ಪರಿಚ್ಛೇದ 31(ಬಿ) ಅಡಿ ಶಾಸನವನ್ನು ರಾಜ್ಯ ಸರ್ಕಾರ ರೂಪಿಸಬೇಕು ಅಥವಾ ಸುಗ್ರೀವಾಜ್ಞೆ ಹೊರಡಿಸಿ, ಸಂವಿಧಾನದ 9ನೇ ಶೆಡ್ಯೂಲಿಗೆ ಶಾಸನವನ್ನು ಸೇರಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕು ಎಂಬ ಬೇಡಿಕೆಯಾದಾರಿಸಿ **2003 ಜೂನ್ 20 ರಂದು "ಕೃಪಾಂಕ ನೌಕರರು ಹಾಗೂ ಅವಲಂಬಿತರ" 'ಬೃಹತ್ ಬೆಂಗಳೂರು ಚಲೋ'** ವನ್ನು ಹಮ್ಮಿಕೊಳ್ಳಲಾಗಿದೆ.

ಬೆಂಗಳೂರು ಚಲೋಗೆ ಪೂರ್ವಭಾವಿಯಾಗಿ **ಜೂನ್ 10 ರಂದು ಕೃಪಾಂಕ ನೌಕರರಿಂದ ರಾಜ್ಯದ ಮುಖ್ಯಮಂತ್ರಿ , ರಾಜ್ಯಾಪಾಲರಿಗೆ ಹಾಗೂ ರಾಷ್ಟ್ರಪತಿ, ಪ್ರಧಾನಮಂತ್ರಿಯವರಿಗೆ ಪೋಸ್ಟ್ ಕಾರ್ಡ್ ಚಳುವಳಿಯನ್ನು** ಸಹಾ ಹಮ್ಮಿಕೊಳ್ಳಲಾಗಿದೆ.

ಬೆಂಗಳೂರಿನಲ್ಲಿ ಮೇ 27 ರಂದು "ಗ್ರಾಮೀಣ ಕೃಪಾಂಕ ನೌಕರರ ಬದುಕಿನ ಪ್ರಶ್ನೆ" ಕುರಿತಂತೆ ರಾಜ್ಯದ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಶಿಕ್ಷಣ ಹಾಗೂ ಕಾನೂನು ತಜ್ಞರುಗಳನ್ನೊಳಗೊಂಡ **"ದುಂಡು ಮೇಜಿನ ಸಭೆ"** ಸಹಾ ಸಂವಿಧಾನದ 31(ಬಿ) ಅಡಿಯಲ್ಲಿ

ಕೆ.ಮಹಾಂತೇಶ್ LL.B.

ಶಾಸನ ರೂಪಿಸಲು ಅಥವಾ ಸುಗ್ರೀವಾಜ್ಞೆ ಹೊರಡಿಸಿ, ಕೃಪಾಂಕ ನೌಕರರನ್ನು ರಕ್ಷಿಸಲು ರಾಜ್ಯ ಸರ್ಕಾರ ಮುಂದಾಗಬೇಕೆಂದು ಒತ್ತಾಯಿಸಿದೆ.

ಸುಗ್ರೀವಾಜ್ಞೆ ಅಥವಾ ಶಾಸನವೇ ದಾರಿ..... ಏಕೆ?

1975 ರಿಂದ ಇಲ್ಲಿಯವರೆಗೆ ಸುಪ್ರಿಂ ಕೋರ್ಟ್ ಕೃಪಾಂಕ ನೀಡುವಂತಹ ಮಾದರಿಯ ಸೌಲಭ್ಯಗಳನ್ನು ಅನೇಕ ಪ್ರಕರಣಗಳಲ್ಲಿ ಅಸಿಂಧುಗೊಳಿಸಿದೆ. 1975ರಲ್ಲಿ ಉತ್ತರ ಪ್ರದೇಶದ ಪ್ರದೀಪ್ ಟಂಡನ್, 1982 ರಲ್ಲಿ ಮಹಾರಾಷ್ಟ್ರದ ರಾಜ್ ಕುಮಾರ್, 1988 ರಲ್ಲಿ ಹರಿಯಾಣದ ಸುನಿಲ್ ಜೈಟ್ಲೆ, 1995 ರಲ್ಲಿ ಆಂಧ್ರಪ್ರದೇಶದ ಎ.ಎನ್. ಸುನಂದಾ ರೆಡ್ಡಿ ಮೊಕದ್ದಮೆಗಳಲ್ಲಿ ಮತ್ತು 1999 ರಲ್ಲಿ ಕರ್ನಾಟಕದ ಬಸವರಾಜ್ ನಾಗೂರು ಮೊಕದ್ದಮೆಯಲ್ಲಿ ಕೃಪಾಂಕ ನೀಡುವಂತಹ ಹಲವಾರು ರಾಜ್ಯ ಸರ್ಕಾರಗಳ ಕಾನೂನುಗಳನ್ನು ಸುಪ್ರಿಂ ಕೋರ್ಟ್ ಅಸಿಂಧುಗೊಳಿಸಿದೆ.

ಅಲ್ಲದೆ 1951 ರಲ್ಲಿ ತಮಿಳುನಾಡು ಸರ್ಕಾರ ದಲಿತರಿಗೆ ಮತ್ತು ಹಿಂದುಳಿದವರಿಗೆ ಉನ್ನತ ಶಿಕ್ಷಣದಲ್ಲಿ ಪ್ರವೇಶ ಮೀಸಲಾತಿ ನೀಡಿದ್ದನ್ನು 'ಚಂಪಕಂ ದೊರೈ ರಾಜ್ ಪ್ರಕರಣ' ದಲ್ಲಿ ಸುಪ್ರಿಂ ಕೋರ್ಟ್ ಅದನ್ನು ಕಾನೂನು ಬಾಹಿರ ಎಂದು ಘೋಷಿಸಿತ್ತು. 1967 ರಲ್ಲಿ ಪಂಜಾಬ್ ರಾಜ್ಯದಲ್ಲಿ ಮೊದಲ ಬಾರಿಗೆ ಭೂಮಿತಿ ಶಾಸನಗಳನ್ನು ತಂದಾಗ **'ಗೋಲಕ್‌ನಾಥ್ ಪ್ರಕರಣ'**ದಲ್ಲಿ ಅದನ್ನು ಅಸಿಂಧುಗೊಳಿಸಿತು. ಹಾಗೂ 1968 ರಲ್ಲಿ ಕೇಂದ್ರ ಸರ್ಕಾರ ಬ್ಯಾಂಕ್ ರಾಷ್ಟ್ರೀಕರಣ ಮಾಡಿದಾಗ 'ಕೂಪರ್ ಪ್ರಕರಣ'ದಲ್ಲಿ ಅದನ್ನೂ ಅಸಿಂಧುವೆಂದು ಘೋಷಿಸಿತು. ಈ ಮೂರು ಪ್ರಕರಣಗಳಲ್ಲೂ ಸಂವಿಧಾನ ತಿದ್ದುಪಡಿ ಮಾಡಲಾಗಿದೆ.

ಈ ನಡುವೆ ಕೃಪಾಂಕ ನೌಕರರ 637 ಜನರ ಗುಂಪೊಂದು ವೈಯಕ್ತಿಕ ಮರುಪರಿಶೀಲನಾ ಅರ್ಜಿಯನ್ನು ಸಲ್ಲಿಸಿ ಮೇ-6 ರ ಆದೇಶಕ್ಕೆ ತಡೆಯಾಜ್ಞೆ ನೀಡಬೇಕೆಂದು ಕೋರಿತ್ತು. ಆದರೆ ಸುಪ್ರಿಂ ಕೋರ್ಟ್ ನ್ಯಾಯಪೀಠವು ತಡೆಯಾಜ್ಞೆ ನೀಡುವುದನ್ನು ಸ್ಪಷ್ಟವಾಗಿ ತಿರಸ್ಕರಿಸಿದೆ. ಇದೀಗ ರಾಜ್ಯ ಸರ್ಕಾರ ಮರುಪರಿಶೀಲನ ಅರ್ಜಿ ಹಾಕಲು ಪುನಃ ತಯಾರಿ ನಡೆಸುತ್ತಿದೆ. ಆದರೆ ಪುನಃ ನ್ಯಾಯಾಲಯದ ಮೊರೆ ಹೋಗುವುದರಿಂದ ಅತಂತ್ರ ನೌಕರರ ಬದುಕಿಗೆ ನ್ಯಾಯ ಸಿಗುವುದು ಮರೀಚಿಕೆ ಎನ್ನಬಹುದು.

ಈ ಹಿನ್ನೆಲೆಯಲ್ಲಿ ಸರ್ವೋಚ್ಚನ್ಯಾಯಾಲಯದ ತೀರ್ಪಿನಿಂದಾಗಿ ಅತಂತ್ರಗೊಂಡಿರುವ 13,270 ನೌಕರರ ಬದುಕನ್ನು ರಕ್ಷಿಸಲು ಸಂವಿಧಾನ ತಿದ್ದುಪಡಿ ಅಥವಾ ಪರಿಚ್ಛೇದ 31(ಬಿ) ಅಡಿಯಲ್ಲಿ ಒಂದು




ಶಾಸನ ಅಥವಾ ಸುಗ್ರೀವಾಜ್ಞೆಯನ್ನು ರೂಪಿಸುವುದು ಮಾತ್ರವೇ ಈಗ ರಾಜ್ಯ ಸರ್ಕಾರದ ಮುಂದಿರುವ ದಾರಿಯಾಗಿದೆ.

ಈ ದಿಶೆಯಲ್ಲಿ ಸರ್ಕಾರವನ್ನು ಒತ್ತಾಯಿಸಲು ವಿವಿಧ ಜನ ಸಮುದಾಯ ಹಾಗೂ ಸಂಘ ಸಂಸ್ಥೆಗಳ ಬೆಂಬಲದೊಂದಿಗೆ ಜೂನ್-20 ರಂದು ನಡೆಯುತ್ತಿರುವ ಬೃಹತ್ ಬೆಂಗಳೂರು ಚಲೋ

ಅತ್ಯಂತ ಮಹತ್ವದ್ದಾಗಿದೆ. ಮಾತ್ರವಲ್ಲ. ರಾಜ್ಯ ಸರ್ಕಾರ ಹಾಗೂ ಸರ್ಕಾರಿ ನೌಕರರ ಸಂಘದ ಸಿಪ್ಪೇಗೌಡರ ಗುಂಪು 13,270 ನೌಕರರನ್ನು ರಕ್ಷಿಸಿಕೊಳ್ಳಲು 'ಪರ್ಯಾಯ ಮಾರ್ಗ'ಗಳನ್ನು ಹುಡುಕಲು ಅಥವಾ ಪ್ರಯತ್ನಿಸಲು ಸಹಾ ಸಾಧ್ಯವಾಗಿರುವ ಹಿನ್ನೆಲೆಯಲ್ಲಿ 13,270 ಜನರ ರಕ್ಷಣೆ ಮಾತ್ರವಲ್ಲ ಇಡೀ 'ಗ್ರಾಮೀಣ ಕೃಪಾಂಕ' ಸಮುದಾಯವನ್ನೇ ರಕ್ಷಿಸಲು ಪರ್ಯಾಯ ಮಾರ್ಗ ಸಾಧ್ಯವಿದೆ. ಆದರೆ ಅದನ್ನು ಜಾರಿಗೊಳಿಸುವ ಮನಸ್ಸು ಮತ್ತು ರಾಜಕೀಯ ಇಚ್ಛೆಯ ಕೊರತೆ ಎದ್ದು ಕಾಣುತ್ತಿದೆ. ಈ ದಿಶೆಯಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಮೇಲೆ ಒತ್ತಡ ಹೇರಲು ನಡೆಯುತ್ತಿರುವ ಈ ರ್‍ಯಾಲಿ ಕೃಪಾಂಕ ನೌಕರರು ಮತ್ತು ಅವಲಂಬಿತರ 'ಆತ್ಮವಿಶ್ವಾಸದ ರ್‍ಯಾಲಿ'ಯೇ ಹೊರತು ನೋವಿನ ರ್‍ಯಾಲಿಯಲ್ಲ.

"ಪರೀಕ್ಷಾಭಿಮುಖಿ ಮತ್ತು ಪಠ್ಯ ಪುಸ್ತಕ ಕೇಂದ್ರಿತವಾಗಿರುವ ಬೋಧನೆಯು ವಿದ್ಯಾರ್ಥಿಗಳಿಗೆ ತಮ್ಮ ಸ್ವಂತ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಹಾಯಕವಾಗಿಲ್ಲ. ಕಲಾತ್ಮಕ, ವೈಜ್ಞಾನಿಕ ಮತ್ತಿತರ ಬಗೆಯ ಪ್ರತಿಭಾ ವಿಕಾಸಕ್ಕೆ ಏನೇನೂ ಪ್ರೋತ್ಸಾಹ ದೊರೆಯುತ್ತಿಲ್ಲ. ಇದರಿಂದಾಗಿ, ಶಾಲಾ ಕಾಲೇಜುಗಳಿಂದ ಹೊರ ಬರುವ ಹುಡುಗ ಹುಡುಗಿಯರು ತಮ್ಮ ಹಳ್ಳಿಗೆ ಹಿಂತಿರುಗಿ ಕಷ್ಟಪಟ್ಟ ಕೆಲಸ ಮಾಡುತ್ತ ಪ್ರಾಮಾಣಿಕ ಬದುಕಿನಲ್ಲಿ ತೊಡಗಲು ಅಸಮರ್ಥರಾಗುತ್ತಾರೆ; ಸಾಮಾನ್ಯವಾಗಿ ಇವರೆಲ್ಲರ ಆಶೋತ್ತರಗಳೆಂದರೆ ಈ ದೇಶದಲ್ಲಿ ಅಥವಾ ಪರದೇಶದಲ್ಲಿ ಒಂದಾನೊಂದು ಬಗೆಯ ದೇಹಶ್ರಮವಿಲ್ಲದ, ಬಟ್ಟೆ ಕೊಳೆಯಾಗದಂತಹ ಕೆಲಸವನ್ನು ಹುಡುಕಿಕೊಳ್ಳುವುದರಿಂದ ಇಡೀ ಶಿಕ್ಷಣ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಬದಲಾಯಿಸಬೇಕು. ಸ್ವದೇಶದಲ್ಲೊ ಪರದೇಶದಲ್ಲೋ ಅಂತೂ ಬಿಳಿ ಕತ್ತು ಪಟ್ಟಿಯ ಉದ್ಯೋಗವನ್ನು ದೊರಕಿಸುವ ಸಲುವಾಗಿ ಕೆಲವೇ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಿಸುವ ಇಂದಿನ ಶಿಕ್ಷಣ ಕ್ರಮವನ್ನು ತಮ್ಮ ಸ್ವಂತ ಹಳ್ಳಿ ಅಥವಾ ಪಟ್ಟಣ ಪ್ರದೇಶದಲ್ಲಿ ಪ್ರಾಮಾಣಿಕವಾಗಿ ಬದುಕ ಬಯಸುವ ಜನರ ಆಶೋತ್ತರಗಳಿಗೆ ಅನುಗುಣವಾಗಿ ತಿದ್ದಬೇಕಾಗಿದೆ."



- ಇ.ಎಂ.ಎಸ್.ನಂಬೂದರಿಪಾಡ್

ವಿಶ್ವವಿಖ್ಯಾತ ಮಾರ್ಕ್ಸ್‌ವಾದಿಗಳು

ನಿಮಗಿದೋ.... ಸ್ವಾಗತ

ಜೂನ್-16 ರಂದು ರಾಜ್ಯ ಸರ್ಕಾರಿ ನೌಕರರ ಸಂಘ ನಡೆಸಿದ ರ್‍ಯಾಲಿಯು ಕೇವಲ ಕಣ್ಣೊರೆಸುವ ತಂತ್ರ ಮಾತ್ರವಲ್ಲ, ಜೂನ್-20 ರಂದು ಕೃಪಾಂಕ ನೌಕರರ ಕ್ರಿಯಾ ಸಮಿತಿ ಆಶ್ರಯದಲ್ಲಿ ನಡೆಯುವ, ರ್‍ಯಾಲಿಯನ್ನು ವಿಫಲಗೊಳಿಸಲು 'ಸಿಪ್ಪೇಗೌಡ ಮತ್ತವರ ನಾಟಕ ಕಂಪನಿ' ತಯಾರಿಸಿದ ನಕಲಿ ಡ್ರಾಮ ಅದೇ ಎಂದು ಸ್ವತಃ ಗ್ರಾಮೀಣ ಕೃಪಾಂಕ ನೌಕರರೇ ಮಾತನಾಡುತ್ತಿದ್ದಾರೆ. ಈಗಾಗಲೇ ಹಲವಾರು ಜಿಲ್ಲೆಗಳಲ್ಲಿ 20 ರ ರ್‍ಯಾಲಿಗೆ ಹೋಗಬಾರದೆಂಬ ತಾಕೀತು ನಡೆಸಲಾಗುತ್ತಿದೆ. ಮಾತ್ರವಲ್ಲ ಸರ್ಕಾರಿ ನೌಕರರು ರಾಜ್ಯ ಸರ್ಕಾರಿ ನೌಕರರ ಸಂಘದ ಸದಸ್ಯರು ಆ ಸಂಘದ ಜೊತೆ ಮಾತ್ರ ಗುರ್ತಿಸಿಕೊಳ್ಳಬೇಕು. ಇತರೆ ಯಾವುದೇ ಖಾಸಗಿ ಸಂಘದ ಜೊತೆ ಗುರುತಿಸಿಕೊಳ್ಳುವುದು ಕಾನೂನು ಬಾಹಿರ ಎಂಬ ಗೊಡ್ಡು ಮತ್ತು ಪ್ರಜಾಪ್ರಭುತ್ವ ವಿರೋಧಿ ಬೆದರಿಕೆಯನ್ನು 'ರ್‍ಯಾಲಿ' ಸಂದರ್ಭದಲ್ಲಿ ಹೊರಡಿಸಲಾದ ಕರಪತ್ರದಲ್ಲಿ ಹಾಕಲಾಗಿದೆ.

ಆದರೆ ರಾಜ್ಯದ ಯಾವುದೇ ಜಿಲ್ಲೆಗಳಲ್ಲಿಯೂ 'ಕೃಪಾಂಕ ನೌಕರರು' ಇಂತಹ 'ಬೆದರಿಕೆ'ಗಳಿಗೆ ಸೊಪ್ಪು ಹಾಕಿಲ್ಲ ಎನ್ನುವುದು ಅಷ್ಟೇ ಸ್ಪಷ್ಟ 'ಗ್ರಾಮೀಣ ಕೃಪಾಂಕ ನೌಕರರ ಕ್ರಿಯಾ ಸಮಿತಿ' ನೇತೃತ್ವದಲ್ಲಿ ಪ್ರಜಾಪ್ರಭುತ್ವ ರೀತಿಯಲ್ಲಿ ಸಂಘಟಿಸಲಾಗುತ್ತಿರುವ ಈ 20 ರ ರ್‍ಯಾಲಿ ತಯಾರಿಗಳು ರಾಜ್ಯಾದ್ಯಂತ ವ್ಯಾಪಕ ರೀತಿಯಲ್ಲಿ ನಡೆದು ಅಭೂತಪೂರ್ವ ಸ್ಪಂದನವನ್ನು ಪಡೆದಿದೆ.

ರಾಜ್ಯದ ಬೆಂಗಳೂರು, ಕೋಲಾರ, ಮಂಡ್ಯ, ಮೈಸೂರು, ತುಮಕೂರು, ದಾವಣಗೆರೆ, ಬಳ್ಳಾರಿ, ಹೊಸಪೇಟೆ, ಕೊಪ್ಪಳ, ರಾಯಚೂರು, ಗುಲ್ಬರ್ಗಾ, ಬಿಜಾಪುರ, ಹುಬ್ಬಳ್ಳಿ, ಕಾರವಾರ, ಉಡುಪಿ, ಮಂಗಳೂರು, ಮಡಿಕೇರಿ, ಹಾಸನ, ಮತ್ತಿತರೆ ಕಡೆಗಳಲ್ಲಿ ಕೃಪಾಂಕ ನೌಕರರ ಸಭೆಗಳು ನಡೆದು 20 ರ ರ್‍ಯಾಲಿಗೆ ಅಗತ್ಯ ತಯಾರಿಗಳನ್ನು ನಡೆಸಲಾಗಿದೆ. ಅಲ್ಲದೆ 2 ಲಕ್ಷ ಕರಪತ್ರ 10 ಸಾವಿರ 'ಭಿತ್ರಿಪತ್ರ'ಗಳು ಹಾಗೂ ಪತ್ರಿಕಾಗೋಷ್ಠಿಗಳನ್ನು ನಡೆಸುವುದರ ಮೂಲಕ ಸಾಕಷ್ಟು ಪ್ರಚಾರವನ್ನು ನಡೆಸಲಾಗಿದೆ. ಮಾತ್ರವಲ್ಲ ನೂರಾರು ಕಾರ್ಯಕರ್ತರುಗಳು ಮತ್ತು ಮುಖಂಡರುಗಳು, ಕಳೆದ 30 ದಿನಗಳಿಂದ ಈ ರ್‍ಯಾಲಿಗೆ ಹಗಲಿರುಳು ದುಡಿಯುತ್ತಿದ್ದಾರೆ. ಈ ನಮ್ಮ ಶ್ರಮ ನಿಜಕ್ಕೂ ವ್ಯರ್ಥವಾಗುವುದಿಲ್ಲವೆಂಬ ಭರವಸೆ ನಮ್ಮದು. ರಾತ್ರಿಯಿಡಿ ದಣಿದು ಬಸ್, ರೈಲು, ಲಾರಿ, ಟೆಂಪೊಗಳಲ್ಲಿ ನೂರಾರು ಊರುಗಳಿಂದ ಆಗಮಿಸುತ್ತಿರುವ ಸಾವಿರಾರು ಕೃಪಾಂಕ ನೌಕರರು ಮತ್ತು ಅವರ ಅವಲಂಬಿತರಿಗೆ ಈ ರ್‍ಯಾಲಿಗೆ ಹಾರ್ದಿಕ ಸ್ವಾಗತ ಬಯಸಲು ಕಾತುರದಿಂದ ನಿಂತಿದ್ದಾರೆ. ನಿಮಗಿದೋ ಹಾರ್ದಿಕ ಸ್ವಾಗತ ನಿಮ್ಮ ನೋವಿಗೆ ನಮ್ಮ ಸ್ಪಂದನೆ... ನಿಮ್ಮ ಹೋರಾಟಕ್ಕೆ ನಮ್ಮ ಬೆಂಬಲ.


ಗ್ರಾಮೀಣ ಕೃಪಾಂಕ - ವ

ಸುಪ್ರಿಂ ಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಗ್ರಾಮೀಣ ಕೃಪಾಂಕ ಆಧಾರಿತವಾಗಿ ನೇಮಕವಾಗಿದ್ದ 13,270 ನೌಕರರು ಅತಂತ್ರ ಸ್ಥಿತಿಯಲ್ಲಿದ್ದಾರೆ. ರಾಜ್ಯ-ಕೇಂದ್ರ ಸರ್ಕಾರಗಳು ನೌಕರರ ರಕ್ಷಣೆಗೆ ಅಗತ್ಯ ಕ್ರಮ ವಹಿಸದಿರುವ ಹಿನ್ನೆಲೆಯಲ್ಲಿ ಮುಂದೇನು ಎಂಬುದು ಪ್ರಸ್ತುತ ಪ್ರಶ್ನೆಯಾಗಿದೆ.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗಾ ತಾಲ್ಲೂಕಿನ ಮಳಲಿ ಗ್ರಾಮದ 28 ವಯಸ್ಸಿನ ರಾಜಪ್ಪ ನಾಗಪ್ಪ ಎಂಬ ಶಿಕ್ಷಕರೊಬ್ಬರು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ವಿಷಯ ಪತ್ರಿಕೆಯಲ್ಲಿ ಇತ್ತೀಚಿಗೆ ವರದಿಯಾಗಿದೆ. ಅಂತೆಯೇ ತುಮಕೂರಿನಲ್ಲಿ ಮದುವೆ ನಿಶ್ಚಿತವಾಗಿದ್ದ ಯುವಕನೋರ್ವನ ಮದುವೆ ಇತ್ತೀಚಿಗೆ ರದ್ದಾಗಿದೆ. ದೂರದ ಬೆಳಗಾವಿಯಿಂದ ಡಿ.ವೈ.ಎಫ್.ಐ. ಕಛೇರಿಗೆ ಫೋನ್ ಮಾಡುವ ನಿರುದ್ಯೋಗಿ ಯುವಕರೊಬ್ಬರು, ಏನಾದರೂ ಮಾಡಿ ನನ್ನ ಹೆಂಡತಿಯ ಕೆಲಸ ಉಳಿಸಿ ಸಾರ್ ಎಂದು ರೋದಿಸುತ್ತಾರೆ. ಒಂದು ವರ್ಷದ ಹಿಂದೆ ಶಿರಾದಲ್ಲಿ ಓರ್ವ ಶಿಕ್ಷಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಉದ್ಯೋಗ ಅದರಲ್ಲೂ ಸರ್ಕಾರಿ ಉದ್ಯೋಗ ಸಿಗುವುದೇ ಜೀವನದ ಒಂದು ಅದೃಷ್ಟ ಎಂಬ ಪರಿಸ್ಥಿತಿ ಪ್ರಸ್ತುತ "ಉದ್ಯೋಗ ರಹಿತ ಬೆಳವಣಿಗೆ" ಎಂಬ ಜಾಗತೀಕರಣದ ಯುಗದಲ್ಲಿ ಇರುವಾಗ, ಮೇಲಿನ ಸರ್ಕಾರಿ ಉದ್ಯೋಗಸ್ತರ ಪಾಡು ಹೀಗೇಕೆ? ಎಂದು ಯಾರಾದರೂ ಪ್ರಶ್ನಿಸಿಕೊಂಡಲ್ಲಿ ಸಿಗುವ ಉತ್ತರ "ಅವರು ಗ್ರಾಮೀಣ ಕೃಪಾಂಕ ನೌಕರರು ಹಾಗಾಗಿ ಅವರಿಗೆ ಈ ಪಾಡು"! ಎಂಬ ಉತ್ತರ ತಟ್ಟನೆ ಹೊಳೆಯುತ್ತದೆ.

ರಾಜ್ಯದ ಜನತೆಯು ಮುಂದೆ, ಮರೆತೆವೆಂದರೂ- ಮರೆಯದಿರಿ ಎಂಬಂತೆ, 1998 ರಿಂದಲೂ ಪ್ರತಿ ವರ್ಷ ಗ್ರಾಮೀಣ ಕೃಪಾಂಕ ಮತ್ತು ಅದರ ವಿಷಯ ಭೂತದಂತೆ ಕಾಡುತ್ತಿದೆ. 2003'ರ ಮೇ.6 ರಂದು ರಾಷ್ಟ್ರದ ಸುಪ್ರಿಂ ಕೋರ್ಟ್ ಕೃಪಾಂಕ ಆಧಾರಿತ ನೌಕರರ ಪ್ರಶ್ನೆಗಳ ಕುರಿತು, 1998-99 ರಲ್ಲಿ ರಾಜ್ಯದಲ್ಲಿ ನೇಮಕವಾಗಿದ್ದ 13,270 ನೌಕರರ ಆಯ್ಕೆ ಕಾನೂನು ಬಾಹಿರವಾದದ್ದು, ಅವರನ್ನು ನಾಲ್ಕು ವಾರದೊಳಗೆ


ನಗರ ಶಿಕ್ಷಣ


ಗ್ರಾಮೀಣ ಶಿಕ್ಷಣಕ್ಕೂ ಇರುವ ವ್ಯತ್ಯಾಸ

ನೌಕರರನ್ನೂ -ಕೃಪಾಂಕ ನೀತಿಯನ್ನೂ ಉಳಿಸಿಕೊಳ್ಳಲು ಸರ್ವಪ್ರಯತ್ನ ಮಾಡಬೇಕು

ದುಂಡು ಮೇಜಿನ ಸಭೆಯ ಒಮ್ಮತ ಅಭಿಮತ

ಸರ್ವೋಚ್ಚ ನ್ಯಾಯಾಲಯದ ತೀರ್ಪಿನಿಂದಾಗಿ ಅತಂತ್ರ ಸ್ಥಿತಿ ತಲುಪಿರುವ 13,500 ನೌಕರರ ಬದುಕನ್ನು ರಕ್ಷಿಸಲು ಮತ್ತು ಭವಿಷ್ಯದಲ್ಲಿ ಗ್ರಾಮೀಣ ಕೃಪಾಂಕವನ್ನು ಖಾತರಿಪಡಿಸಲು 'ಸಂವಿಧಾನಕ್ಕೆ ಸೂಕ್ತ ತಿದ್ದುಪಡಿ ಮಾಡುವುದು ಮಾತ್ರವೇ ಮುಂದಿರುವ ದಾರಿ. ಈ ದಿಸೆಯಲ್ಲಿ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕೆಂದು ಮೇ-27 ರಂದು ಬೆಂಗಳೂರಿನಲ್ಲಿ ನಡೆದ "ಗ್ರಾಮೀಣ ಕೃಪಾಂಕ ಆಧಾರಿತ ನೇಮಕವಾಗಿರುವ 13,500 ನೌಕರರ ಬದುಕಿನ ಪ್ರಶ್ನೆ" ಕುರಿತ ದುಂಡು ಮೇಜಿನ ಸಭೆ ಸರ್ವಸಮ್ಮತ ನಿರ್ಣಯ ಕೈಗೊಂಡಿದೆ.

ಡಿ.ವೈ.ಎಫ್.ಐ ಮತ್ತು ಎಸ್.ಎಫ್.ಐ ರಾಜ್ಯ ಸಮಿತಿಗಳು ಸಂಘಟಿಸಿದ್ದ ಈ ಸಭೆಯಲ್ಲಿ ರಾಜ್ಯದ ಎಲ್ಲಾ ರಾಜಕೀಯ ಪಕ್ಷಗಳ ಧುರೀಣರು, ಕಾನೂನು, ಶಿಕ್ಷಣ ತಜ್ಞರು, ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸಿ ಸುಮಾರು ಮೂರು ತಾಸುಗಳ ಕಾಲ ಸುದೀರ್ಘ ಚರ್ಚೆ ನಡೆಸಿದರು.

ಸರ್ವೋಚ್ಚ ನ್ಯಾಯಾಲಯ ಕೃಪಾಂಕದ ಆಧಾರದಲ್ಲಿ ನೇಮಕವಾಗಿರುವ 13,500 ನೌಕರರನ್ನು 8 ವಾರಗಳ ಒಳಗೆ ಸೇವೆಯಿಂದ ಬಿಡುಗಡೆಗೊಳಿಸಬೇಕೆಂದು ಆದೇಶಿಸಿದೆ. ಅದನ್ನು ಪುನರ್ ಪರಿಶೀಲಿಸಲು ಇರುವ ಅವಕಾಶಗಳನ್ನು ವಿವರವಾಗಿ ಚರ್ಚಿಸಿದ ಸಭೆಯು ಇದರಿಂದಾಗಿ ನೌಕರರ ಭವಿಷ್ಯದ ಮೇಲೆ ಯಾವುದೇ ಪ್ರಯೋಜನವಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿತು. ಅಲ್ಲದೆ 1975 ರಿಂದಲೂ ಸರ್ವೋಚ್ಚ ನ್ಯಾಯಾಲಯವು ಕೃಪಾಂಕ ನೀಡುವಂತಹ ಮಾದರಿಯ ಸೌಲಭ್ಯಗಳನ್ನು, 1975 ರ ಪ್ರದೀಪ ಥಂಡನ್ ಮೊಕದ್ದಮೆಯಲ್ಲಿ, 1982 ರಲ್ಲಿ ರಾಜಕುಮಾರ್ ಮೊಕದ್ದಮೆಯಲ್ಲಿ, 1988 ರಲ್ಲಿ ಸುನಿಲ್ ಜೈಟ್ಲಿ ಮೊಕದ್ದಮೆಯಲ್ಲಿ 1995 ರಲ್ಲಿ ಎನ್. ಸುನಂದಾರೆಡ್ಡಿ ಮೊಕದ್ದಮೆಯಲ್ಲಿ ಅಸಿಂಧು ಗೊಳಿಸಿರುವುದನ್ನು ನಾವು ಕಾಣಬಹುದಾಗಿದೆ. ಈಗ ಪುನಃ 1999 ರಲ್ಲಿ ಧಾರವಾಡದ ಬಸವರಾಜ್ ನಾಗೂರು ಪ್ರಕರಣದಲ್ಲಿ ಕರ್ನಾಟಕದಲ್ಲಿ ಗ್ರಾಮೀಣ ಕೃಪಾಂಕ ನೀಡುವಿಕೆಯನ್ನು 'ಸಂವಿಧಾನಬಾಹಿರ'ವೆಂದು ಘೋಷಿಸಿದೆ. ಇದಲ್ಲದೆ 53 ವರ್ಷಗಳ ನ್ಯಾಯಾಂಗದ ಅನುಭವವನ್ನು ಗಮನಿಸಿದಾಗ ಸಂವಿಧಾನದ ಮೂಲಭೂತ ತತ್ವಗಳಲ್ಲಿ ಒಂದಾದ' 'ಸಾಮಾಜಿಕ ನ್ಯಾಯದ' ಬಗ್ಗೆ ಹೊರಬಂದಿರುವ ತೀರ್ಪುಗಳು ಹಾಗೂ ಸರ್ವೋಚ್ಚ ನ್ಯಾಯಾಲಯದ ವ್ಯಾಖ್ಯಾನ, ಸಾಮಾನ್ಯ ಜನರಲ್ಲಿ ನ್ಯಾಯಾಂಗದ ಬಗ್ಗೆ ಸಂಪೂರ್ಣ ನಂಬಿಕೆಯುನ್ನಿಡಲು ಸಾಧ್ಯವಿಲ್ಲವೆಂಬ ಸತ್ಯ ಗೋಚರವಾಗುತ್ತದೆ. ಅದಕ್ಕೆ ಉದಾಹರಣೆಯಾಗಿ-

1951 ರಲ್ಲಿ ತಮಿಳುನಾಡು ಸರ್ಕಾರ 'ದಲಿತರಿಗೆ ಮತ್ತು ಹಿಂದುಳಿದವರಿಗೆ ಉನ್ನತ ಶಿಕ್ಷಣದಲ್ಲಿ ಪ್ರವೇಶ ಮೀಸಲಾತಿ ನೀಡಿದ್ದನ್ನು, ಮತ್ತು ಪಂಜಾಬ್‌ನಲ್ಲಿ ಮೊದಲನೆ ಬಾರಿಗೆ 'ಭೂಮಿತಿ' ಶಾಸನ ಜಾರಿ ಮಾಡಿದಾಗ ಮತ್ತು ಕೇಂದ್ರ ಸರ್ಕಾರ ಬ್ಯಾಂಕ್‌ಗಳ ರಾಷ್ಟ್ರೀಕರಣ ಮಾಡಿದ ಸಂದರ್ಭದಲ್ಲಿ, ದೇಶದ ಸರ್ವೋಚ್ಚ ನ್ಯಾಯಾಲಯವು ಈ ಪ್ರಮುಖ ಮೂರು ಪ್ರಕರಣಗಳನ್ನು 'ಅಸಿಂಧು' ಎಂದು ಘೋಷಿಸಿತು. ಈ ಪ್ರಕರಣಗಳಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತರುವುದರ ಮೂಲಕ 'ಸಾಮಾಜಿಕ ನ್ಯಾಯ' ವನ್ನು ಎತ್ತಿ ಹಿಡಿಯಲಾಯಿತು.

ಈ ಹಿನ್ನೆಲೆಯಲ್ಲಿ ಈ ದೇಶದ ನಗರ ಹಾಗೂ ಗ್ರಾಮಾಂತರ ಜನರ ನಡುವೆ ಇರುವಂತಹ ಅಂತರವನ್ನು ಗಮನಿಸಿ ಉತ್ತರಪ್ರದೇಶ, ಮಹಾರಾಷ್ಟ್ರ, ಹರಿಯಾಣ, ರಾಜಸ್ಥಾನ, ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯಗಳು ಈ ಅಸಮಾನತೆಯನ್ನು ತೊಲಗಿಸಲು ಕೃಪಾಂಕವನ್ನು ನೀಡಿದ್ದನ್ನು ಈಗ ಸರ್ವೋಚ್ಚ ನ್ಯಾಯಾಲಯವು 'ಅಸಿಂಧು'ವೆಂದು ಘೋಷಿಸಿರುವ ಹಿನ್ನೆಲೆಯಲ್ಲಿ ಸಂವಿಧಾನ ತಿದ್ದುಪಡಿ ಅಥವಾ ಪರಿಚ್ಛೇಧ 31(ಬಿ) ಅಡಿಯಲ್ಲಿ ಒಂದು ಶಾಸನವನ್ನು ರೂಪಿಸುವ ಮುಖಾಂತರ 13,500 ನೌಕರರ ಬದುಕನ್ನು ರಕ್ಷಿಸುವ ಮತ್ತು ಗ್ರಾಮಾಂತರ ಕೃಪಾಂಕವನ್ನು ಮುಂದುವರೆಸುವ ಕೆಲಸವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ತುರ್ತಾಗಿ ನಡೆಸಬೇಕೆಂದು "ದುಂಡು ಮೇಜಿನ ಸಭೆ" ಆಗ್ರಹಪಡಿಸಿತು.

ಸಭೆಯಲ್ಲಿ ಭಾಗವಹಿಸಿದ್ದ ಕರ್ನಾಟಕ ಸರ್ಕಾರದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಡಿ.ಬಿ.ಚಂದ್ರೇಗೌಡರಿಗೆ ಅತಂತ್ರಗೊಂಡಿರುವ 13,500 ನೌಕರರ ಸೇವಾ ಭದ್ರತೆಯನ್ನು ಕಾಪಾಡಲು ಅಗತ್ಯವಿರುವ ಕಾನೂನು ರೂಪಿಸಲು ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದ ಸಭೆಯು ಒಟ್ಟಾರೆ ಕೃಪಾಂಕವನ್ನು ಮುಂದುವರೆಸಲು 'ಸಂವಿಧಾನ ತಿದ್ದುಪಡಿ'ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಬೇಕೆಂದು ಒತ್ತಾಯಿಸಿದರು.

ಸಭೆಯಲ್ಲಿ ಕರ್ನಾಟಕ ಸರ್ಕಾರದ ಪರವಾಗಿ ಡಿ.ಬಿ.ಚಂದ್ರೇಗೌಡ, ಜನತಾದಳ(ಯು) ಶಾಸಕಾಂಗ ಪಕ್ಷದ ನಾಯಕ, ಪಿ.ಜಿ.ಆರ್.ಸಿಂಧ್ಯಾ, ಎ.ಬಿ.ಜೆ.ಡಿ. ರಾಜ್ಯಾಧ್ಯಕ್ಷ, ಸಿ.ಬೈರೇಗೌಡ, ಬಿಜೆಪಿಯ ರಾಮಚಂದ್ರಗೌಡ, ಜೆ.ಡಿ.(ಎಸ್) ಮಹಾ ಪ್ರಧಾನ ಕಾರ್ಯದರ್ಶಿ,ಸಿ. ನಾರಾಯಣ ಸ್ವಾಮಿ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಸಿಪಿಐನ ಎಂ.ಸಿ.ನರಸಿಂಹನ್, ಶಿಕ್ಷಣ ತಜ್ಞರಾದ ಡಾ.ಚಂದ್ರಶೇಖರ್ ಪಾಟೀಲ, ಡಾ. ಜಿ.ರಾಮಕೃಷ್ಣ, ಶಾಸಕರಾದ ಡಾ.ಎಲ್. ಹನುಮಂತಯ್ಯ, ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಅಧ್ಯಕ್ಷ ಯು.ಡಿ.ನರಸಿಂಹಯ್ಯ, ರಾಜ್ಯ ರೈತ ಸಂಘ(ಪುಟ್ಟಣ) ಸಂಘಟನಾ ಕಾರ್ಯದರ್ಶಿ ಮಹಾದೇವನ್ ಮಾತನಾಡಿದರು. ಪತ್ರಕರ್ತ ಸನತ್‌ಕುಮಾರ್ ಬೆಳಗಲಿ, ಸೆಂಟ್ ಜೋಸೆಫ್ ಸಂಜೆ ಕಾಲೇಜಿನ ಪ್ರಾಂಶುಪಾಲ ಅಂಬ್ರೋಸ್ ಪಿಂಟೊ, ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಆರ್.ರಾಮಕೃಷ್ಣ, ಅಧ್ಯಕ್ಷೆ, ಕೆ.ಎಸ್.ಲಕ್ಷ್ಮಿ ಮೊದಲಾದವರು ಉಪಸ್ಥಿತರಿದ್ದರು.

ಆರಂಭದಲ್ಲಿ ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್ ಸ್ವಾಗತಿಸಿದರು. ಹೆಸರಾಂತ ವಕೀಲರಾದ ಹೆಚ್.ಎನ್.ನಾಗಮೋಹನ್‌ದಾಸ್ ವಿಷಯ ಪ್ರಸ್ತಾವನೆ ಮಾಡಿದರು. ಡಿ.ವೈ.ಎಫ್.ಐ. ರಾಜ್ಯ ಅಧ್ಯಕ್ಷ ಕೆ.ಎನ್.ಉಮೇಶ್ ಅಧ್ಯಕ್ಷತೆ ವಹಿಸಿದ್ದರು.

- ಕೆ.ಮಹಾಂತೇಶ್


ದುಂಡುಮೇಜಿನ ಸಭೆಯಲ್ಲಿ ಸರ್ವಪಕ್ಷಗಳ ಪ್ರತಿನಿಧಿಗಳು ಮತ್ತು ಶಿಕ್ಷಣ ತಜ್ಞರು, ವಿವಿಧ ಸಂಘಟನೆಗಳ ಪ್ರತಿನಿಧಿಗಳು

...ವೇನು?

ಕೆ.ಎನ್.ಉಮೇಶ್ LL.M.

...ಂದ ಬಿಡುಗಡೆ ಮಾಡಬೇಕೆಂದು ತೀರ್ಪು ... ರಾಜ್ಯ ಸರ್ಕಾರ ಮತ್ತೆ ನಾಲ್ಕು ವಾರಗಳ ... ಅವಕಾಶ ಕೋರಿರುವ ಕಾರಣ 2003' ...ಲೈ 6ರೊಳಗೆ, 13,270 ನೌಕರರನ್ನು ...ಂದ ಬಿಡುಗಡೆ ಮಾಡಬೇಕು ಎಂದು ... ಕೋರ್ಟ್ ಹೇಳಿದೆ.

... ಕುರಿತು ರಾಜ್ಯ ಸರ್ಕಾರವು ತನ್ನ ಮುಂದೆ ... ರೂಪಿಸಬೇಕೆ ಅಥವಾ ಸುಗ್ರೀವಾಜ್ಞೆ ...ಡಿಸಬೇಕೆ, ಸಂವಿಧಾನ ತಿದ್ದುಪಡಿಗೆ ...ಸಬೇಕೆ, ಅಥವಾ ಸುಪ್ರಿಂ ಕೋರ್ಟ್ ...ಂತೆ ಅವರನ್ನು ನೌಕರಿಯಿಂದ ಬಿಡುಗಡೆ ... ನಂತರ ಗುತ್ತಿಗೆ ...ದಲ್ಲಿ ನೇಮಕ ...ಳ್ಳಬೇಕೆ ಎಂಬ ನಾಲ್ಕು ...ಿವೆ ಎಂದು ಹೇಳುತ್ತಿದೆ. ಈ ಆಯ್ಕೆಗಳ ...ಅವರನ್ನು ನೌಕರಿಯಿಂದ ಬಿಡುಗಡೆ ಮಾಡಿ ... ಆಧಾರದಲ್ಲಿ ನೇಮಕ ಮಾಡಿಕೊಳ್ಳುವ ...ಬಗ್ಗೆ ಹೆಚ್ಚು ಆಸಕ್ತಿಯಿಂದ ಇರುವುದಾಗಿ ...ದೆ. ಹಾಗಾಗಿ ರಾಜ್ಯದ ಬಹುತೇಕ ...ಯ ಪಕ್ಷಗಳು, ಕಾನೂನು ತಜ್ಞರ ...ದಂತೆ ಸಂವಿಧಾನ ತಿದ್ದುಪಡಿಗೆ ಕೇಂದ್ರ ...ವನ್ನು ಒತ್ತಾಯಿಸುವ ಯಾವುದೇ ...ಾಗಲೀ ತಯಾರಿನ್ನಾಗಲಿ ರಾಜ್ಯ ಸರ್ಕಾರ ...ಗೆ ಮಾಡಿಲ್ಲ. ಮಾತ್ರವಲ್ಲ ಅಧಿಕೃತ ...ನ್ನು ಸಹಾ ನೀಡಿಲ್ಲ.

... ನಡುವೆ ಇಡೀ ಕೃಪಾಂಕ ನೌಕರರನ್ನು ...ವೆ ಎಂದು ಹೇಳಿ ಎಲ್ಲಾ 13,270 ... ಸಹಾ ವೈಯಕ್ತಿಕ ಅರ್ಜಿಯನ್ನು ಸುಪ್ರಿಂ ...ಗೆ ಸಲ್ಲಿಸಬೇಕು. ಮಾನವೀಯ ...ದ ಆಧಾರದಲ್ಲಿ ಸುಪ್ರಿಂ ಕೋರ್ಟ್‌ಗೆ ...ಪರಿಶೀಲನಾ ಅರ್ಜಿ ಸಲ್ಲಿಸಬೇಕು ಎಂದು ...ರ್ಕಾರಿ ನೌಕರರ ಸಂಘ ಒತ್ತಾಯಿಸಿದೆ. ...ಕರರಿಂದ ವ್ಯಾಪಕ ಬೆಂಬಲ ಸಿಗದಿದ್ದರೂ ...637 ನೌಕರರು ...ವ ಅರ್ಜಿಯನ್ನು ...ಮೂರ್ತಿಗಳಾದ ...ಷ್ ಹೆಗಡೆ ಹಾಗೂ ...ಕ್ ಪಾಟೀಲ್‌ರ ...ಾಲಿದ ಪೀಠವು ...ರಜೆಯ ನಂತರ, ...5 ರ ನಂತರ ...ಾಗುವ ಪೀಠದ ... ಅರ್ಜಿ ಸಲ್ಲಿಸಲು ... ಅದರೆ 2003'ರ ...ರ ಸುಪ್ರಿಂ ಕೋರ್ಟ್ ತೀರ್ಪಿಗೆ ತಡೆ ...ನ್ನು ಅರ್ಜಿದಾರರು ಕೋರಿದ್ದರೂ ಸಹಾ ...ಯನ್ನು ನೀಡಿಲ್ಲ. ಪರಿಣಾಮವಾಗಿ ನೌಕರಿ ...ಳ್ಳುವ ಆಘಾತಕ್ಕೊಳಗಾಗಿದ್ದ ನೌಕರರಿಗೆ ...ಜ್ಞೆ'ಯ ಆಸರೆ ದೊರೆತಿದ್ದರೂ, ತಡೆ ಆಜ್ಞೆ ...ರುವ ಕಾರಣ, ಜುಲೈ 5 ರೊಳಗೆ ...ಂದ ಸರ್ಕಾರ ಬಿಡುಗಡೆಗೊಳಿಸಿದರೆ, ...ನು? ಎಂಬ ಆತಂಕ ನೌಕರರನ್ನು ಹಾಗೂ ... ಕಾಡಿದೆ. ಸುಪ್ರಿಂ ಕೋರ್ಟ್ ತೀರ್ಪಿನ ...ಲ್ಲಿಯೇ ಪರಿಹಾರ ಕಂಡುಕೊಳ್ಳುವುದಾಗಿ ... ಹೇಳುತ್ತಿದೆ. ಆದರೆ ವಯೋಮಿತಿ ...ನೌಕರರನ್ನು ಪುನರ್ ನೇಮಕ ...ಳ್ಳಲು ಸಾಧ್ಯವಾಗದು. ಅವರಿಗೇನು ...ಎಂಬುದನ್ನು ಸರ್ಕಾರ ಸ್ಪಷ್ಟಪಡಿಸುತ್ತಿಲ್ಲ.

ಈ ಎಲ್ಲದರ ಕಾರಣ ಇಡೀ ವಿಷಯ ಗೋಜಲು ಗೋಜಲಾಗಿದೆ. ಕೃಪಾಂಕ ನೌಕರರನ್ನು ಸೇವೆಯಿಂದ ಬಿಡುಗಡೆ ಮಾಡದೆ ಅನ್ಯಮಾರ್ಗವಿಲ್ಲ ಎಂಬ ಭಾವನೆ ಮೂಡಿಸಲು ಸರ್ಕಾರ ನಿರತವಾಗಿದೆ.

13,270 ನೌಕರರಲ್ಲಿ, ಸುಮಾರು 9000 ಶಿಕ್ಷಕ/ಶಿಕ್ಷಕಿಯರು, 26 ಜನ ತಾಲ್ಲೂಕು ನ್ಯಾಯಾದೀಶರು, ವೈದ್ಯರು, ಪೋಲೀಸ್ ಇನ್ಸ್‌ಪೆಕ್ಟರ್ಸ್, ಪೇದೆಗಳು, ಕ್ಲಾರ್ಕ್‌ಗಳು ಮುಂತಾ ದವರಿದ್ದಾರೆ. ಸರ್ಕಾರದ ಪ್ರಸಕ್ತ ಆರ್ಥಿಕ ನೀತಿಗಳಾದ ಉದಾರೀಕರಣ, ಉದ್ಯೋಗ ಕಡಿತ, ಖಾಸಗೀಕರಣದ ಭಾಗವಾಗಿ ಎಲ್ಲಾ ರಂಗದಲ್ಲೂ ಗುತ್ತಿಗೆ ವ್ಯವಸ್ಥೆಯನ್ನು ಜಾರಿಗೊಳಿಸಲು ಕೇಂದ್ರ- ರಾಜ್ಯ ಸರ್ಕಾರಗಳು ಮುಂದಾಗುತ್ತಿರುವ ಈ ಜಾಗತೀಕರಣದ ಯುಗದಲ್ಲಿ, ಸುಪ್ರಿಂ ಕೋರ್ಟ್ ತೀರ್ಪು ರಾಜ್ಯ ಸರ್ಕಾರಕ್ಕೆ ಒಂದು ರೀತಿ "ರೋಗಿ ಬಯಸಿದ್ದು ಹಾಲು ಅನ್ನ ವೈದ್ಯರು ಹೇಳಿದ್ದು ಹಾಲು ಅನ್ನ" (blessing in disguise) ಎಂಬಂತಾಗಿದೆ. ಪರಿಣಾಮವಾಗಿ ಸರ್ಕಾರಿ ಶಾಲೆಗಳಲ್ಲಿ ಇದುವರೆಗೆ ಇರದಿದ್ದ ಗುತ್ತಿಗೆ ಆಧಾರದ ನೌಕರಿಯನ್ನು, ಇನ್ನು ಮುಂದೆ ಒಂದೇ ಬಾರಿಗೆ 9000 ಶಿಕ್ಷಕರನ್ನು ಗುತ್ತಿಗೆ ಶಿಕ್ಷಕರನ್ನಾಗಿಸುವ ತನ್ನ ಉದಾರೀಕರಣ ಪ್ರೇರಿತ ಮಹಾದಾಸೆಯನ್ನು ಜಾರಿಗೊಳಿಸಿದಂತಾಗುತ್ತದೆ. ಹಾಗಾಗಿ ಈ ಹಿಂದಿನ ಅನೇಕ ಸಂದರ್ಭಗಳಲ್ಲಿ ಸುಪ್ರಿಂ ಕೋರ್ಟ್ ತೀರ್ಪನ್ನು ಉಲ್ಲಂಘಿಸಿಯಾದರೂ ಜನತೆಯ ಹಿತ ಕಾಪಾಡುವ ಮಾತುಗಳನ್ನು, ಕನಿಷ್ಠ ಬಾಯಿ ಮಾತನ್ನಾದರೂ ಆಡಲು ಸರ್ಕಾರ ಸಿದ್ದವಿಲ್ಲ! ಬದಲಿಗೆ ಸುಪ್ರಿಂ ಕೋರ್ಟ್ ತೀರ್ಪು ಜಾರಿಮಾಡುವ ವಿಧೇಯಕರಂತೆ ಅದನ್ನು ಜಾರಿ ಮಾಡಿ ನಂತರ ಗುತ್ತಿಗೆ ನೇಮಕ ಮಾಡಿಕೊಳ್ಳುವುದಾಗಿ ಹೇಳುತ್ತಿದೆ.

ಏನೀ ಕೃಪಾಂಕ?



ಶಾಸಕಾಂಗ, ಕಾರ್ಯಾಂಗ, ಹಾದಿ ತಪ್ಪಿದಾಗ ದಾರಿಗೆ ತರುವ ಕೆಲಸ ನ್ಯಾಯಾಂಗದ್ದು, ಹತ್ತಾರು ವರ್ಷಗಳ ಅನುಭವವೆಂದರೆ ಬಹುಜನ ಸಮುದಾಯದ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲಾರದಂಥ ಕೌರ್ಯವನ್ನು ನ್ಯಾಯಾಂಗ ಪಡೆದುಕೊಂಡಿದೆ.

ಡಾ. ಚಂದ್ರಶೇಖರ್ ಪಾಟೀಲ

ಸ್ವಾತಂತ್ರ್ಯಾನಂತರದ ಭಾರತದ ಬೆಳವಣಿಗೆಯ ಗುತ್ತಿಗೆಯನ್ನು ಪಡೆದ ಬಂಡವಾಳಶಾಹಿ- ಭೂಮಾಲಿಕ ವರ್ಗಗಳ ನೇತೃತ್ವದ ಆಡಳಿತವು, ದೇಶದ ಉದ್ದಗಲಕ್ಕೂ ಶೇ.80 ರಷ್ಟು ಜನ ವಾಸಿಸುವ ಗ್ರಾಮಾಂತರ ಪ್ರದೇಶದ ಅಭಿವೃದ್ಧಿಯನ್ನು ರಾಷ್ಟ್ರದ ನಗರಗಳ ಅಭಿವೃದ್ಧಿಗಿಂತ ಅನೇಕ ಪಟ್ಟು ಹಿಂದುಳಿಸಿವೆ. ಪರಿಣಾಮವಾಗಿ ಶಾಲೆಗಳ ಕೊರತೆ, ಶಾಲೆಗಳಿದ್ದರೂ, ಶಿಕ್ಷಕರ ಕೊರತೆ, ಪಾಠ, ಆಟೋಟ, ಪೀಠೋಪಕರಣದ ಕೊರತೆ, ಕಲಿಕೆಯ ಪರಿಸರದ ಕೊರತೆ ಹೀಗೆ ನೂರಾರು ಕೊರತೆಗಳಿಂದಾಗಿ ನಗರ ಪ್ರದೇಶಗಳಲ್ಲಿ ಶಿಕ್ಷಣ ಪಡೆದವರೊಂದಿಗೆ ಪೈಪೋಟಿ ನಡೆಸಲಾಗದೆ ಸರ್ಕಾರಿ ನೌಕರಿ ಮತ್ತಿತರೆ ವಲಯಗಳಲ್ಲಿ ಸೂಕ್ತ ಪ್ರಾತಿನಿಧ್ಯ ಸಿಗದೆ ವಂಚಿತರಾಗಿದ್ದಾರೆ.

ಇಂತಹ ಅಸಮಾನ ಬೆಳವಣಿಗೆಯ ಹಿನ್ನೆಲೆಯಲ್ಲಿ ಗ್ರಾಮಾಂತರ ಜನತೆಗೆ ಸಾಮಾಜಿಕ ನ್ಯಾಯ ಒದಗಿಸುವ ಉದ್ದೇಶಧೊಂದಿಗೆ. 1993 ರಲ್ಲಿ ಅಂದಿನ ಬಂಗಾರಪ್ಪ ನೇತೃತ್ವದ ರಾಜ್ಯ ಸರ್ಕಾರವು ಶಿಕ್ಷಣ- ಉದ್ಯೋಗದಲ್ಲಿ ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಶೇ.5 ರಷ್ಟು ಕೃಪಾಂಕ ಒದಗಿಸುವ ನಿಟ್ಟಿನಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳಿಗೆ ತಿದ್ದುಪಡಿಯನ್ನು ತಂದಿತು. ಪರಿಣಾಮವಾಗಿ 1994 ರಿಂದ ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಠ 10 ವರ್ಷ ವಿದ್ಯಾಭ್ಯಾಸ ಮಾಡಿದವರಿಗೆ ಶಿಕ್ಷಣ- ಉದ್ಯೋಗಾವಕಾಶಗಳಲ್ಲಿ ಶೇ.5 ರಷ್ಟು ಕೃಪಾಂಕ ನೀಡಿತು. ಆನಂತರ 1996 ಹಾಗೂ 1997 ರಲ್ಲಿ ಅಂದಿನ ಜೆ.ಹೆಚ್.ಪಟೇಲ್ ನೇತೃತ್ವದ ಸರ್ಕಾರ ಈ ಕೃಪಾಂಕವನ್ನು ಶೇ.10ಕ್ಕೆ ಏರಿಸಿತು ಹಾಗೂ ಎಲ್ಲಾ ವಿಭಾಗದ ಸರ್ಕಾರಿ ನೌಕರರಿಗೂ ಇದನ್ನು ವಿಸ್ತರಿಸಿತು ಮಾತ್ರವಲ್ಲದೆ "ಗ್ರಾಮಾಂತರ ಅಭ್ಯರ್ಥಿ" ಯ ಅರ್ಥ ವ್ಯಾಪ್ತಿಯನ್ನು ವಿಸ್ತರಿಸಿತು.

ಪುಟ 6 ಕ್ಕೆ

ಹಳ್ಳಿ ಮತ್ತು ಪಟ್ಟಣಗಳ ನಡುವಿನ ವೈರುಧ್ಯ ಮತ್ತು ಗ್ರಾಮೀಣ ಕೃಪಾಂಕ

ಜಿ.ಎನ್.ನಾಗರಾಜ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ

ಇದು ಮಾರ್ಕ್ಸ್‌ವಾದದ ಮೂಲಭೂತ ತಿಳುವಳಿಕೆ (ಪರಿಕಲ್ಪನೆ)ಗಳಲ್ಲೊಂದಾಗಿದೆ. ಮಾನವಸಮಾಜದ ಬೆಳವಣಿಗೆಯ ಇತಿಹಾಸದಲ್ಲಿ ಆಳುವ ವರ್ಗದ ಹಾಗೂ ಪ್ರಭುತ್ವಗಳ ಉಗಮ, ಅಂದರೆ ಮೊತ್ತ ಮೊದಲ ಶೋಷಣೆಯ ವ್ಯವಸ್ಥೆಯ ಜೊತೆಜೊತೆಗೆ ನಗರಗಳು ಬೆಳೆದುಬಂದವು. ಕುಶಲಕರ್ಮಿಗಳ ಹಾಗೂ ಬೌದ್ಧಿಕ ಶ್ರಮದ ಕೇಂದ್ರಗಳಾದವು. ಅಂದು ಆರಂಭವಾದ ಈ ವೈರುಧ್ಯ ಇಂದು ಬಂಡವಾಳಶಾಹಿ ವ್ಯವಸ್ಥೆಯಲ್ಲಿ, ಅದರಲ್ಲಿಯೂ ಅಮೇರಿಕ, ಬ್ರಿಟನ್ ಮೊದಲಾದ ಸಾಮ್ರಾಜ್ಯಶಾಹಿಗಳ ಹತೋಟಿಯಲ್ಲಿ ಇಡೀ ಪ್ರಪಂಚ ನಲುಗುತ್ತಿರುವ ವ್ಯವಸ್ಥೆಯಲ್ಲಿ ಇನ್ನಷ್ಟು, ಮತ್ತಷ್ಟು ತೀವ್ರಗೊಂಡಿದೆ. ನಗರಗಳಲ್ಲಿ ಉತ್ಪಾದಕ ಶಕ್ತಿಗಳ ಬೆಳವಣಿಗೆ ತೀವ್ರಗತಿಯಲ್ಲಿ ಬೆಳೆಯುತ್ತಾ, ಕೇಂದ್ರೀಕೃತವಾಗುತ್ತಾ ನಗರ ಹಾಗೂ ಗ್ರಾಮೀಣ ಜೀವನದ ನಡುವಣ ಅಂತರ ಹೆಚ್ಚಾಗುತ್ತಿದೆ. ಅದು ಶಿಕ್ಷಣದ ಮೇಲೆ ಅನೇಕ ರೀತಿಯ, ಊಹಿಸಿಕೊಳ್ಳಲಾಗದ ರೂಪದಲ್ಲಿ ಪರಿಣಾಮ ಬೀರುತ್ತದೆ. ಅದರಲ್ಲಿ ಶಾಲೆಯ ಒಳಗಿನ ಹಾಗೂ ಅದಕ್ಕಿಂತಲೂ ಮುಖ್ಯವಾದ ಹೊರಗಿನ ವಾತಾವರಣವನ್ನು ಶಿಕ್ಷಣಪರ ಹಾಗೂ ಶಿಕ್ಷಣಮುಖಿಯಾಗಿಸುವುದರಲ್ಲಿ ಸುಮಾರು 30 ರಿಂದ 300 ರವರೆಗಿನ ವಿದ್ಯಾರ್ಥಿಗಳನ್ನುಳ್ಳ ಹಳ್ಳಿಗಳ ಪ್ರಾಥಮಿಕ ಶಾಲೆಗಳು ಕೇವಲ ಒಂದು ತರಗತಿಯಲ್ಲಿಯೇ ವಿವಿಧ ಸೆಕ್ಷನ್‌ಗಳು ನಡೆದು ಹಲವು ಬಾರಿ 200-300 ವಿದ್ಯಾರ್ಥಿಗಳನ್ನು ಪಡೆದಿರುವ ನಗರದ ಶಾಲೆಗಳು ವಿದ್ಯಾರ್ಥಿಯ ಬೌದ್ಧಿಕ ಸಾಂಸ್ಕೃತಿಕ ಹಾಗೂ ಕ್ರೀಡಾ ಬೆಳವಣಿಗೆಗೆ ನಿರ್ಮಿಸುವ ವಾತಾವರಣವನ್ನು, ಪುಸ್ತಕಭಂಡಾರ, ಶಿಕ್ಷಕರ ಗುಣಮಟ್ಟ ವಿವಿಧ ವಿಷಯಗಳಿಗೆ ವಿಶೇಷ ತರಬೇತಿ ಪಡೆದ ಶಿಕ್ಷಕರು, ನಾಟಕ, ಸಂಗೀತ ... ಪಠ್ಯೇತರ ವಿಷಯಗಳಿಗೆ ವಿಶೇಷ ಶಿಕ್ಷಕರು ಇತ್ಯಾದಿ ಸೌಲಭ್ಯಗಳನ್ನು ನೀಡಲಾಗದು. ಶಾಲೆಯ ಹೊರಗೆ ಮನೆಯಲ್ಲಿ ತಂದೆ ತಾಯಂದಿರಿಂದ ಮಕ್ಕಳ ಶಿಕ್ಷಣಕ್ಕೆ ವಿಶೇಷ ಗಮನ, ಮನೆಯಲ್ಲಿ ಕಲಿಸುವಿಕೆ, ಪೂರಕ ಪುಸ್ತಕಗಳು ಸೌಲಭ್ಯಗಳು; ಬೇರೆ ಬೇರೆ ಪರಿಣತಿ ಪಡೆದ ವಿವಿಧ ಉದ್ಯೋಗಗಳಲ್ಲಿರುವ ಸಂಬಂಧಿಗಳು ಮಿತ್ರರ ಕುಟುಂಬಗಳ ಒಡನಾಟ, ಅದರಿಂದ ಬೀರುವ ವೈವಿಧ್ಯಮಯ ಬೌದ್ಧಿಕ, ಸಾಂಸ್ಕೃತಿಕ ಪ್ರಭಾವ; ಅವುಗಳ ಜೊತೆಗೆ ವ್ಯಾಪಾರೀಕರಣಗೊಂಡ ಶಿಕ್ಷಣದ ಭಾಗವಾಗಿ ಟ್ಯೂಷನ್, ಟ್ಯುಟೋರಿಯಲ್‌ಗಳು ಇತ್ಯಾದಿಗಳ ಪಾತ್ರವೇನು ಕಡಿಮೆಯೇ? ಹಾಗೆಯೇ ನಗರಗಳಲ್ಲಿ ಲಭ್ಯವಿರುವ ಗ್ರಂಥಾಲಯಗಳು, ಉಚ್ಚಮಟ್ಟದ ಶೈಕ್ಷಣಿಕ ಸಂಸ್ಥೆಗಳು ಅವುಗಳ ಚಟುವಟಿಕೆಗಳು, ವಿವಿಧ ವಿಚಾರಗೋಷ್ಠಿಗಳು, ಸಾಂಸ್ಕೃತಿಕ ಚಟುವಟಿಕೆಗಳು, ಮಕ್ಕಳ ಜ್ಞಾನದ ಹಸಿವನ್ನು ಉಚ್ಚ ಮಟ್ಟಕ್ಕೇರಿಸುತ್ತವೆ, ವೈವಿಧ್ಯಮಯಗೊಳಿಸುತ್ತದೆ. ಇಂತಹ ಸೌಲಭ್ಯಗಳು ಹಳ್ಳಿಗಳಲ್ಲಿ ಎಂದಾದರೂ ಲಭ್ಯವಾಗುವುದು ಸಾಧ್ಯವೇ? ಅದಕ್ಕೆ ಮಾರ್ಕ್ಸ್ ಮತ್ತು ಲೆನಿನ್ ಮೊದಲಾದ ಮಾರ್ಕ್ಸ್‌ವಾದಿ ತತ್ವವಂತರು ಸಮಾಜವಾದಿ ವ್ಯವಸ್ಥೆಯ ಸ್ಥಾಪನೆಯ ನಂತರವೂ ಹಲವು ದಶಕಗಳ ತೀವ್ರ ಪ್ರಯತ್ನದಿಂದ ಮಾತ್ರ ಈ ಅಂತರವನ್ನು ಕಡಿಮೆ ಮಾಡುವುದು ಸಾಧ್ಯವಾಗುತ್ತದೆ. ಅದರ ಪೂರ್ಣ ನಿವಾರಣೆ ಸಮಾಜವಾದದ ಮೇಲಿನ ಹಂತವಾದ ಸಮತಾವಾದಿ ಸಮಾಜದ ಘಟ್ಟದಲ್ಲಿ ಮಾತ್ರ ಸಾಧ್ಯ ಎನ್ನುತ್ತಾರೆ. ಅಲ್ಲಿಯವರೆಗೂ ನಗರ ಮತ್ತು ಹಳ್ಳಿಗಳ ವೈರುಧ್ಯದ ಪರಿಣಾಮವನ್ನು ಪರಿಹರಿಸಲು ಹಲವಾರು ಕ್ರಮಗಳು ಅಗತ್ಯ. ಅದರಲ್ಲಿ ಗ್ರಾಮಾಂತರ ಕೃಪಾಂಕವೂ ಒಂದು. ಇದು ಕೃಪೆಯಿಂದ ನೀಡುವ ಅಂಕವೂ ಅಲ್ಲ. ಪರಿಸ್ಥಿತಿಯಲ್ಲಿ ಅಡಕವಾಗಿರುವ ಅಸಮಾನತೆಗೆ ಅಲ್ಪ ಪ್ರಮಾಣದ ಪರಿಹಾರ.

ಈ ಅಲ್ಪ ಪ್ರಮಾಣದ ಪರಿಹಾರವನ್ನು ಪಡೆದ ತಕ್ಷಣ ಗ್ರಾಮಾಂತರದ ಉದ್ಯೋಗಾರ್ಥಿಗಳೆಲ್ಲರಿಗೆ ಉದ್ಯೋಗ ಸಿಗುತ್ತದೆಂದೇನೂ ಅಲ್ಲ. ಅದಕ್ಕಾಗಿ ಗ್ರಾಮೀಣ ಹಾಗೂ ನಗರಗಳ ನಿರುದ್ಯೋಗಿಗಳು ಒಟ್ಟಾಗಿ ಸೇರಿ ಚಳುವಳಿ ನಡೆಸಬೇಕಾಗುತ್ತದೆ. ಇದು ಒಂದೆಡೆಯಾದರೆ ಗ್ರಾಮ ಮತ್ತು ನಗರಗಳ ನಡುವಣ ಅಸಮಾನತೆಯನ್ನು ತಡೆಯಬೇಕೆಂದರೆ ಅಸಮಾನತೆಯ ಮೂಲವಾದ ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆಯಬೇಕಾಗುತ್ತದೆ. ಸಮಾಜವಾದಿ ಸಮಾಜದ ನಿರ್ಮಾಣಕ್ಕಾಗಿ ದುಡಿಯಬೇಕಾಗುತ್ತದೆ.

......ಶಾಸನ, ಸಂವಿಧಾನ ತಿದ್ದುಪಡಿ ಒಂದೇ ಮಾರ್ಗ

ಪುಟ 7 ರಿಂದ

ನ್ಯಾಯಾಲಯ ಎತ್ತಿರುವ ಪ್ರಶ್ನೆ?

1998 ರಲ್ಲಿ ಕೆ.ಪಿ.ಎಸ್.ಸಿ ಪರೀಕ್ಷೆ ತೆಗೆದುಕೊಂಡಿದ್ದ ಧಾರವಾಡದ ಬಸವರಾಜ್ ನಾಗೂರ್ ಎಂಬವರೊಬ್ಬರು, ಗ್ರಾಮಾಂತರ ಕೃಪಾಂಕ ಸಂವಿಧಾನದ "ಮೂಲಭೂತ ಹಕ್ಕುಗಳನ್ನು" ಉಲ್ಲಂಘಿಸುತ್ತದೆ ಎಂದು ರಾಜ್ಯ ಉಚ್ಚ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಲ್ಲಿಸಿದರು.

1998'ರ ನವೆಂಬರ್ 11 ರಂದು ಈ ರಿಟ್ ಅರ್ಜಿಯ ಮೇಲೆ ತೀರ್ಪು ನೀಡಿದ ರಾಜ್ಯ ಉಚ್ಚನ್ಯಾಯಾಲಯದ ನ್ಯಾಯಮೂರ್ತಿಗಳಾದ ಭರೂಕಾರವರು, "ಗ್ರಾಮೀಣ ಕೃಪಾಂಕ" ನೀಡುವ ನಿಯಮಾವಳಿಗಳು ಸಂವಿಧಾನದ ಪರಿಚ್ಛೇದ 14,15 ಮತ್ತು 16 ಅನ್ನು ಉಲ್ಲಂಘಿಸುತ್ತವೆ. ಸಂವಿಧಾನ ಜನತೆಗೆ ಕೊಡಮಾಡಿರುವ ಮೂಲಭೂತ ಹಕ್ಕುಗಳಾದ ಸಮಾನತೆಯ ಹಕ್ಕು, ವೃತ್ತಿಯಲ್ಲಿ ಸಮಾನತೆಯ ಹಕ್ಕು, ಕಾನೂನಿನ ಮುಂದೆ ಸರ್ವ ನಾಗರೀಕರು ಸಮಾನರು ಎಂಬ ಅಂಶಗಳನ್ನು ಉಲ್ಲಂಘಿಸುತ್ತವೆ ಎಂದು ತೀರ್ಪನ್ನು ನೀಡಿದರು. ಸರ್ಕಾರಗಳು ಜನತೆಯಲ್ಲಿ ಧರ್ಮ, ಜನಾಂಗ, ಜಾತಿ, ಲಿಂಗ, ಜನ್ಮಸ್ಥಳ, ಅಥವಾ ವಾಸಸ್ಥಳ ಆಧಾರದಲ್ಲಿ ಬೇಧ ಎಣಿಸಬಾರದು ಎಂಬ ಸಂವಿಧಾನದ ಮೂಲ ಅಂಶಗಳನ್ನು ಕೃಪಾಂಕ ಉಲ್ಲಂಘಿಸುತ್ತದೆ ಎಂದು ತೀರ್ಪು ನೀಡಿದರು.

ಆನಂತರ ರಾಜ್ಯ ಸರ್ಕಾರದ ಮೇಲ್ಮನವಿಯ ಮೇರೆಗೆ ರಾಜ್ಯ ಉಚ್ಚನ್ಯಾಯಾಲಯದ ವಿಭಾಗೀಯ ನ್ಯಾಯಪೀಠವು ಸಹಾ ಭರೂಕಾರವರ ತೀರ್ಪನ್ನು ಎತ್ತಿ ಹಿಡಿಯಿತು.

ಸಾಮಾಜಿಕ ನ್ಯಾಯದ ಪ್ರಶ್ನೆ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳು

ಸಂವಿಧಾನದ ಸಮಾನತೆಯ ಪರಿಕಲ್ಪನೆಯೊಳಗೆ ಇರುವ ರಿಯಾಯಿತಿಯಾದ 'ಹಿಂದುಳಿದ ವರ್ಗದ ವ್ಯಾಪ್ತಿಗೆ ಒಟ್ಟಾರೆಯಾಗಿ ಇಡೀ ಗ್ರಾಮಾಂತರ ಜನತೆ ಬರುತ್ತಾರೆಯೆ ಎಂಬ ಪ್ರಶ್ನೆಗೆ ರಾಷ್ಟ್ರದ ಸರ್ವೋಚ್ಚ ನ್ಯಾಯಾಲಯವು ಇಡೀ ಗ್ರಾಮಾಂತರ ಜನತೆಯನ್ನೆಲ್ಲಾ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಿಂದುಳಿದಿವೆ ಎಂದು ಪರಿಗಣಿಸಲು ಸಾಧ್ಯವಿಲ್ಲ ವೆಂದು, ಹಾಗಾಗಿ 'ಸಾಮಾಜಿಕ ನ್ಯಾಯ'ದ ಅಂಶ ಇಲ್ಲಿ ಬರುವುದಿಲ್ಲ ಎಂದು ಸ್ಪಷ್ಟಪಡಿಸಿವೆ. ಅಂತೇ ಗ್ರಾಮೀಣ ಪ್ರದೇಶ ನಗರ ಪ್ರದೇಶಗಳಿಗಿಂತ ಶೈಕ್ಷಣಿಕವಾಗಿ ಮೂಲ ಸೌಕರ್ಯಗಳ ಮಾಪನದಲ್ಲಿ ಹಿಂದುಳಿದಿವೆ ಎಂದು ತೋರಲು ಯಾವುದೇ ಅಂಕಿ-ಅಂಶ'ಗ'ಳಾ'ಗ'ಲಿ, ಸಾಕ್ಷ್ಯಾಧಾರಗಳಾಗಲಿ ಇಲ್ಲ ಎಂಬುದನ್ನು ಸಹ ಸರ್ವೋಚ್ಚ ನ್ಯಾಯಾಲಯವು ತಿಳಿಸಿದೆ.

ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಏನು ಆಧಾರ?

ಸರ್ವೋಚ್ಚ ನ್ಯಾಯಾಲಯವು ಈ ಕುರಿತು ತನ್ನ ತೀರ್ಪನ್ನು ಮೊದಲ ಬಾರಿಗೆ 1975 ರಲ್ಲಿ ಉತ್ತರ ಪ್ರದೇಶ ರಾಜ್ಯ ಮತ್ತು ಪ್ರದೀಪ್ ಟಂಡನ್ ಮೊಕದ್ದಮೆಯಲ್ಲಿ ನೀಡುತ್ತಾ ಇಡೀ ಗ್ರಾಮಾಂತರ ಪ್ರದೇಶದ ಜನರನ್ನು ಹಿಂದುಳಿದ ವರ್ಗವೆಂದು ಪರಿಗಣಿಸಲು ಆಗದು, ಜನಸಂಖ್ಯೆಯಷ್ಟೆ ವರ್ಗವಾಗಲಾರದು, ಗ್ರಾಮಾಂತರ ಅಂಶವೂ ಸಹಾ ಅದನ್ನು ವರ್ಗವನ್ನಾಗಿ ಮಾರ್ಪಡಿಸದು ಎಂದಿದೆ. ಉತ್ತರ ಪ್ರದೇಶದ ಶೇ.90 ರಷ್ಟು ಜನ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಾರೆ. ಅವರೆಲ್ಲರೂ ತಮ್ಮೊಳಗೆಯೇ ಒಂದೇ ರೀತಿಯ ವರ್ಗವಲ್ಲ, ಅದರಲ್ಲಿ ಕೆಲವರು ಶೈಕ್ಷಣಿಕವಾಗಿ ಹಾಗೂ ಕೆಲವರು ಸಾಮಾಜಿಕವಾಗಿ ಹಿಂದುಳಿದಿರಬಹುದು. ಗ್ರಾಮಾಂತರ ಪ್ರದೇಶವನ್ನೆಲ್ಲಾ ಶೈಕ್ಷಣಿಕವಾಗಿ-ಸಾಮಾಜಿಕವಾಗಿ ಹಿಂದುಳಿದಿದೆ ಎಂದು ಹೇಳುವುದು, ಅದರ ಆಧಾರದಲ್ಲಿ ಗ್ರಾಮಾಂತರ ಪ್ರದೇಶದ, ಗುಡ್ಡಗಾಡು ಪ್ರದೇಶದ ಹಾಗೂ ಉತ್ತರಖಂಡ ಪ್ರದೇಶದ ಜನರ ಪರವಾಗಿ ಮೀಸಲಾತಿ ನೀಡುವುದು, ರಾಜ್ಯದ ಬಹುಸಂಖ್ಯಾತ ವಿಭಾಗಕ್ಕೆ ಮೀಸಲಾತಿ ನೀಡಿದಂತಾಗುತ್ತದೆ ಎಂದು ಹೇಳಿದೆ.

ಅಂತೆಯೇ 1982 ರಲ್ಲಿ ಮಹಾರಾಷ್ಟ್ರ ರಾಜ್ಯ ಮತ್ತು ರಾಜ್‌ಕುಮಾರ್ ಮೊಕದ್ದಮೆಯಲ್ಲಿ ಗ್ರಾಮಾಂತರ ಕೃಪಾಂಕ ನೀಡುವ ನೇಮಕಾತಿ ನಿಯಮಗಳು ನ್ಯಾಯಾಂಗ ಪರಿಶೀಲನೆಗೆ ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂತು. ನ್ಯಾಯಮೂರ್ತಿಗಳಾದ ಫಜಲ್ ಆಲಿಯವರು ಗ್ರಾಮಾಂತರ ಕೃಪಾಂಕ ನೀಡುವಿಕೆ "ಅರ್ಹತೆಯನ್ನು ಅನರ್ಹತೆಯನ್ನಾಗಿ ಹಾಗೂ ಅನರ್ಹತೆಯನ್ನು ಅರ್ಹತೆಯನ್ನಾಗಿ ಮಾರ್ಪಡಿಸುತ್ತದೆ, ಮತ್ತು ಪರಿಚ್ಛೇದ 14 ನ್ನು ಉಲ್ಲಂಘಿಸುತ್ತದೆ, ಗ್ರಾಮಾಂತರ- ನಗರ ವರ್ಗೀಕರಣವು ಅನುಮತಿಸಲಾಗದ ವರ್ಗೀಕರಣವೆಂದು" ತೀರ್ಪು ನೀಡಿದ್ದಾರೆ.

1984 ರಲ್ಲಿ ಸುನೀಲ್ ಜೈಟ್ಲೆ ಮತ್ತು ಹರಿಯಾಣ ರಾಜ್ಯ ಮೊಕದ್ದಮೆಯಲ್ಲಿ ವೃತ್ತಿಪರ ಕಾಲೇಜುಗಳಲ್ಲಿ ಪ್ರವೇಶಾವಕಾಶ ಬಯಸುವ ಗ್ರಾಮಾಂತರ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದ್ದ ಕೃಪಾಂಕ ಕುರಿತು ತೀರ್ಪನ್ನು ನೀಡುತ್ತಾ ಸರ್ವೋಚ್ಚ ನ್ಯಾಯಾಲಯವು "ಸಮಾನ ಸರ್ಕಾರಿ ನಿಗದಿತ ಪಠ್ಯಕ್ರಮ, ಅನುದಾನ, ಅರ್ಹತೆ ಹೊಂದಿದ ಶಿಕ್ಷಕರನ್ನು ನಗರ ಹಾಗೂ ಗ್ರಾಮಾಂತರ ಪ್ರದೇಶಗಳೆರಡಕ್ಕೂ ನಿರ್ದೇಶಿಸುವಾಗ" ಈ ವರ್ಗೀಕರಣ ಸಲ್ಲದು ಎಂದಿದೆ. ಹರಿಯಾಣದ ಗ್ರಾಮಾಂತರ ಪ್ರದೇಶದ ಪರಿಸ್ಥಿತಿ ಅನೇಕ ನಗರ ಪ್ರದೇಶದ ಕೊಳಚಿ ಸ್ಲಂಗಳಲ್ಲಿನ ಪರಿಸ್ಥಿತಿಗಿಂತ ಉತ್ತಮವಾಗಿದೆ. ಗ್ರಾಮಾಂತರ ಪ್ರದೇಶದ ಶಾಲೆಗಳೆಲ್ಲವು ಕಟ್ಟಡವಿಲ್ಲದೆ, ಸೌಲಭ್ಯರಹಿತ ವಾಗಿಲ್ಲ. ಹಾಗಾಗಿ 1 ರಿಂದ 8ನೇ ತರಗತಿ ಯವರೆಗೆ ಗ್ರಾಮಾಂತರ ಪ್ರದೇಶದಲ್ಲಿ ಓದಿದ ವಿದ್ಯಾರ್ಥಿಗಳಿಗೆ ಕೃಪಾಂಕ ನೀಡುವುದು ಸಂವಿಧಾನ ಬಾಹಿರವೆಂದು ಹೇಳಿದೆ.

1995 ರಲ್ಲಿ ವಿ.ಎನ್. ಸುನಂದಾ ರೆಡ್ಡಿ ಮತ್ತು ಆಂಧ್ರಪ್ರದೇಶ ಸರ್ಕಾರ ಮೊಕದ್ದಮೆಯಲ್ಲಿ, ನೇಮಕಾತಿಗಳಲ್ಲಿ ತೆಲುಗು ಮಾಧ್ಯಮ ವಿದ್ಯಾರ್ಥಿಗಳಿಗೆ ಅವರು ಪಡೆದ ಒಟ್ಟಾರೆ ಅಂಕಗಳಿಗೆ ಸರಾಸರಿ ಶೇ.5 ರಷ್ಟು ಅಂಕ ನೀಡುವ ಕ್ರಮವನ್ನು ಸರ್ವೋಚ್ಚ ನ್ಯಾಯಾಲಯವು ಅಸಿಂಧುಗೊಳಿಸಿತು. ತೀರ್ಪನ್ನು ನೀಡುತ್ತಾ ನ್ಯಾಯಾಲಯವು "ಸರ್ಕಾರದ ಈ ನಿಯಮಗಳು ಮುಕ್ತ ಮಾರ್ಕೆಟ್ಟಿನಲ್ಲಿ ಲಭ್ಯವಾಗಬಲ್ಲ ಉತ್ತಮ ಅಭ್ಯರ್ಥಿಗಳನ್ನು ದೂರವಿರಿಸಿ, ಆಡಳಿತದಲ್ಲಿನ ದಕ್ಷತೆಯನ್ನು ದುರ್ಬಲಗೊಳಿಸುತ್ತದೆ" ಎಂದು ವ್ಯಾಖ್ಯಾನಿಸಿದೆ. ಈ ಮೇಲಿನ ತೀರ್ಪುಗಳ ಆಧಾರದಲ್ಲಿಯೇ ಸರ್ವೋಚ್ಚ ನ್ಯಾಯಾಲಯವು 1999 ರಲ್ಲಿ ಕೃಪಾಂಕ' ರದ್ದುಪಡಿಸುವ ರಾಜ್ಯ ಉಚ್ಚನ್ಯಾಯಾಲಯದ ವಿಭಾಗೀಯ ನ್ಯಾಯಪೀಠದ ತೀರ್ಪನ್ನು ಎತ್ತಿಹಿಡಿದು, ರಾಜ್ಯ ಸರ್ಕಾರದ ಮೇಲ್ಮನವಿಯನ್ನು ತಿರಸ್ಕರಿಸಿದೆ.

ಆನಂತರ ರಾಷ್ಟ್ರದ ಸುಪ್ರಿಂ ಕೋರ್ಟ್ ಸಹಾ ರಾಜ್ಯ ಉಚ್ಚನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿಯಿತು.

1975 ರಲ್ಲಿ ಅಂದಿನ ಉತ್ತರ ಪ್ರದೇಶ ಸರ್ಕಾರ ನೀಡಿದ್ದ ಇದೇ ರೀತಿಯ ಗ್ರಾಮಾಂತರ ಕೃಪಾಂಕ, 1982 ರಲ್ಲಿ ಮಹಾರಾಷ್ಟ್ರ, 1984 ರಲ್ಲಿ ಹರಿಯಾಣ ಸರ್ಕಾರ ಹಾಗೂ 1995 ರಲ್ಲಿ ಆಂಧ್ರ ಪ್ರದೇಶ ಸರ್ಕಾರಗಳು ನೀಡಿದ್ದ ಇಂತಹುದೇ ಸಾಮಾಜಿಕ ನ್ಯಾಯದ ಸೌಲಭ್ಯಗಳನ್ನು ಸುಪ್ರಿಂ ಕೋರ್ಟ್ ಈ ಹಿಂದೆಯೇ ಸಂವಿಧಾನಬಾಹಿರ ಎಂದು ತೀರ್ಪು ನೀಡಿತ್ತು. ಈ ತೀರ್ಪುಗಳನ್ನು ಆಧರಿಸಿ ರಾಜ್ಯದ ಗ್ರಾಮೀಣ ಕೃಪಾಂಕ ನೀಡುವ ನಿಯಮಾವಳಿಗಳನ್ನು ಸಂವಿಧಾನ ಬಾಹಿರ ಎಂದು ನ್ಯಾಯಾಲಯಗಳು ತೀರ್ಪು ನೀಡಿವೆ.



ಇದರ ಜೊತೆಯಲ್ಲಿಯೇ ಗ್ರಾಮೀಣ ಜನತೆ ಹಿಂದುಳಿದಿದ್ದಾರೆ ಎಂಬುದಕ್ಕೆ ಹಾಗೂ ಗ್ರಾಮೀಣ ಪ್ರದೇಶಗಳ ಹಿಂದುಳಿದಿರುವಿಕೆಗೆ ಯಾವುದೇ ಸಾಕ್ಷ್ಯ ಆಧಾರಗಳಿಲ್ಲ ಹಾಗೂ ಸರ್ಕಾರಗಳು ಒದಗಿಸಿಲ್ಲ ಎಂದು ಗಂಭೀರವಾಗಿ ತೀರ್ಪಿನಲ್ಲಿ ನ್ಯಾಯಾಲಯಗಳು ತಿಳಿಸಿವೆ.

ಸುಪ್ರಿಂ ಕೋರ್ಟ್ ತೀರ್ಪಿನ ನಂತರ ಆ ತೀರ್ಪು ಕೇವಲ ಅರ್ಜಿದಾರರಿಗೆ ಮಾತ್ರ ಜಾರಿಯಾಗುತ್ತದೆ ಎಂದು ಅದನ್ನು ಪರಿಗಣಿಸಿ 13,270 ನೌಕರರನ್ನು ನೌಕರಿಯಿಂದ ತೆರವುಗೊಳಿಸದಿರುವ ಬಗ್ಗ ಸಲ್ಲಿಸಲಾದ ನ್ಯಾಯಾಂಗ ನಿಂದನೆ ಅರ್ಜಿಯನ್ನು ಸುಪ್ರಿಂ ಕೋರ್ಟ್ ವಜಾ ಮಾಡಿತು. ಆನಂತರ ಸುಪ್ರಿಂ ಕೋರ್ಟ್ ತೀರ್ಪನ್ನು ಮರುಪರಿಶೀಲನೆ ಮಾಡಲು ಕೋರಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿದ ಸುಪ್ರಿಂ ಕೋರ್ಟ್ ಪೀಠವು 2003 ಮೇ.6 ರಂದು ತೀರ್ಪು ನೀಡುತ್ತಾ, ಕೋರ್ಟಿನ ತೀರ್ಪು 13,270 ನೌಕರರಿಗೂ ಅನ್ವಯಿಸುತ್ತದೆ. ಅವರೆಲ್ಲರನ್ನು ಸೇವೆಯಿಂದ ತೆರವು ಗೊಳಿಸಬೇಕು ಎಂದಿದೆ.

ಪರಿಹಾರ ಏನು?

ಕೃಪಾಂಕ ನೀಡಲು ರಾಜ್ಯ ಸರ್ಕಾರವು ಕರ್ನಾಟಕ ನಾಗರಿಕ ಸೇವಾ ನಿಯಮಾ ವಳಿಗಳಿಗೆ ತಿದ್ದುಪಡಿ ತಂದದ್ದು, 1978' ರ ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮ ದಡಿಯಲ್ಲಿನ ರಾಜ್ಯ ಸರ್ಕಾರದ ಅಧಿಕಾರದಡಿ. ಈ ಅಧಿನಿಯಮವನ್ನು ಸರ್ಕಾರ ಅಂಗೀಕರಿಸಿರುವುದು ಸಂವಿಧಾನದ 7ನೇ ಶೆಡ್ಯೂಲ್‌ನಡಿ. ಪರಿಣಾಮವಾಗಿ ಈ ಅಧಿನಿಯಮ ಹಾಗೂ ಅದರಡಿ ರೂಪಿಸಲಾಗುವ ನಿಯಮಾವಳಿಗಳನ್ನು ಸಂವಿಧಾನದ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುತ್ತವೆಯೇ ಎಂದು ಪ್ರಶ್ನಿಸಲ್ಪಟ್ಟಲ್ಲಿ ನ್ಯಾಯಾಲಯಗಳು ಪರಿಶೀಲಿಸಬಹುದು ಹಾಗೂ ಸಂವಿಧಾನಬಾಹಿರ ಎಂದು ಘೋಷಿಸಬಹುದು.

ಸಂವಿಧಾನದಲ್ಲಿ ಕೊಡಮಾಡಿರುವ ಪರಿಚ್ಛೇದ 31(ಬಿ) ಅಡಿ 9ನೇ ಶೆಡ್ಯೂಲ್‌ಗೆ ಸೇರ್ಪಡೆಯಾಗುವಂತೆ ಶಾಸನ ರೂಪಿಸಿ ಕೃ
ವ್ಯವಸ್ಥೆಯನ್ನು ಹಾಗೂ ಈ ನೌಕರರನ್ನು
ಬಹುದಾಗಿದೆ. ಶಾಸನ ರೂಪಿ
ಸಮಯಾವಕಾಶ ಬೇಕಾದಲ್ಲಿ ಸುಗ್ರೀ
ಹೊರಡಿಸಿ, ಆನಂತರ ಅದನ್ನು ಶಾ
ಮಾಡಬಹುದು. ಇದು ಸಹಾ ಕಾರ್ಯ
ವಾಗದಿದ್ದಲ್ಲಿ ಗ್ರಾಮೀಣ ಮೀಸಲಾತಿ "
ಕೃಪಾಂಕದ ಪ್ರಶ್ನೆ ಕೇವಲ ಕರ್ನಾ
ಪ್ರಶ್ನೆಯಾಗಿರದೆ, ಇದು ಇಡೀ ದ
ಪ್ರಶ್ನೆಯಾಗಿದೆ. ಕಳೆದ 27 ವರ್ಷಗಳಿಂದ
ವಿವಿಧ ರಾಜ್ಯಗಳ ಮುಂದಿನ ಪ್ರಶ್ನೆಯ
ಹಾಗಾಗಿ ಇದಕ್ಕೆ ಪೂರಕವಾಗಿ ಅಗತ್ಯ
ಸಂವಿಧಾನ ತಿದ್ದುಪಡಿಯೊಂದೇ ಅ
ಪರಿಹಾರವಾಗಿದೆ.

ಈ ನಿಟ್ಟಿನಲ್ಲಿ ಸಂವಿಧಾನದ ಪರಿಚ್ಛೇ
(ಬಿ) ಅಡಿ ಶಾಸನ ರೂಪಿಸದಿದ್ದಲ್ಲಿ
ಸಂವಿಧಾನ ತಿದ್ದುಪಡಿ ತರದಿದ್ದಲ್ಲಿ ನ್ಯಾಯ
ಜಿ.ರಾಮಕೃಷ್ಣ ಆಯೋಗದ ಶಿಫಾರಸ್ಸನ್ನು
ಗ್ರಾಮಾಂತರ ಅಭ್ಯರ್ಥಿಗಳಿಗೆ ಪ್ರಸ್ತುತ
ಸರ್ಕಾರ ನೀಡಿರುವ ಶೇ.25 ರಷ್ಟು
ಮೀಸಲಾತಿ ಅಥವಾ ಬರಗೂರು ರಾಮ
ವರದಿ ಆಧಾರಿತವಾಗಿ ಕನ್ನಡ ಮಾ
ವಿದ್ಯಾರ್ಥಿಗಳಿಗೆ ನೀಡಲಾಗಿರುವ ಶೇ.5 ದ
ಮೀಸಲಾತಿಗಳು ಸಹಾ ಪ್ರಶ್ನಿಸಲ್ಪಟ್ಟಲ್ಲಿ
ಪರೀಕ್ಷೆಯಲ್ಲಿ ನಿಲ್ಲಲಾರವು ಮಾತ್ರ
ಸಂವಿಧಾನಬಾಹಿರ ಎಂದು ಘೋಷಿಸಲ್ಪ

ಆದ ಕಾರಣವೇ 98 ರಲ್ಲಿ ನ್ಯಾಯ
ಭರೂಕಾರವರು 'ಗ್ರಾಮೀಣ ಕೃಪಾಂಕ' ಸ
ಬಾಹಿರ ಎಂದು ತೀರ್ಪು ನೀಡಿದಾಗ
ಎಸ್‌ಎಫ್‌ಐ- ಡಿವೈಎಫ್‌ಐ ಗ್ರಾಮೀಣ
ರಕ್ಷಣೆಗೆ "ಸಂವಿಧಾನ ತಿದ್ದುಪಡಿ" ತರ
ಒತ್ತಾಯಿ ಸುತ್ತಾ ಬಂದಿವೆ, ಹೋರ
ನಿರತವಾಗಿ ಸೆರೆವಾಸ, ಪೋಲೀಸ್ ಮ
ಗಳನ್ನು ಎದುರಿಸುತ್ತಿವೆ.

"ಪ್ರಾಥಮಿಕ ಮತ್ತು ಮಾಧ್ಯಮಿಕ ಘಟ್ಟದಲ್ಲಿ ನಾವು ಮಕ್ಕಳಿಗೆ ಒದಗಿಸುತ್ತಿರುವ ಪಠ್ಯ ಪುಸ್ತಕ ಬರಡಾದ, ನಿರಾಕರ್ಷವಾದ, ತಪ್ಪುಗಳಿಂದ ತುಂಬಿದ ಬರಹಗಳು ಇನ್ನಾವ ದೇಶದ ಸಿಗಲಾರವು. ಅವರ ಕುತೂಹಲ ಬೆಳೆಯಿಸುವುದಕ್ಕೆ ನಮ್ಮಲ್ಲಿದ್ದಷ್ಟು ಗ್ರಂಥಗಳ ಅಭಾವ ಇಲ್ಲ.

- ಡಾ. ಶಿವರಾಮ
ಜ್ಞಾನ ಪೀಠ ಪ್ರಶಸ್ತಿ ವಿ

...ಸಂವಿಧಾನದಡಿಯ ...ಮಾನತೆಯ ಪರಿಕಲ್ಪನೆ

...ಸಮಾನತೆಯನ್ನೇ ನೆಲೆಯಾಗಿರಿಸಿ ...ಗೊಂಡ ಭಾರತದಂತಹ ಸಮಾಜದಲ್ಲಿ ...' ರ ಸಂವಿಧಾನ ಒಳಗೊಂಡ ...ಾನತೆಯ ಪರಿಕಲ್ಪನೆ ಅತ್ಯಂತ ...ತ್ತರವಾದದ್ದು. ಈ ಹಿನ್ನೆಲೆಯಲ್ಲಿ ...ಧಾನದ ಪರಿಚ್ಛೇದ 14, 15 ಹಾಗೂ ...ನ್ನು ನೋಡಬೇಕಿದೆ.

...ರಿಚ್ಛೇದ 14 ಒದಗಿಸುವ ಮೂಲಭೂತ ...ೆಂದರೆ ಪ್ರಭುತ್ವವು ಯಾವುದೇ ವ್ಯಕ್ತಿಗೆ ...ತದ ಪ್ರದೇಶದೊಳಗೆ ಕಾನೂನಿನ ...ದಿನ ಸಮಾನತೆಯನ್ನು ಅಥವಾ ...ನುಗಳ ಸಮಾನ ರಕ್ಷಣೆಯನ್ನು ...ರಿಸುವಂತಿಲ್ಲ ಎಂಬುದಾಗಿದೆ.

...ರಿಚ್ಛೇದ 15 ಹೇಳುವುದೇನೆಂದರೆ, ...ೆಯರು ಹಾಗೂ ಮಕ್ಕಳಿಗೆ ಅಥವಾ ...ೀಕರಲ್ಲಿನ ಸಾಮಾಜಿಕವಾಗಿ ಹಾಗೂ ...ಕವಾಗಿ ಹಿಂದುಳಿದ ವಿಭಾಗಗಳ ...ಪರಿಶಿಷ್ಟ ಜಾತಿ ಮತ್ತು ಪಂಗಡಗಳ ...ೃದ್ಧಿಗಾಗಿ ಕೈಗೊಳ್ಳುವ ವಿಶೇಷ ...ಯಿತಿಗಳನ್ನು ಹೊರತುಪಡಿಸಿ ಕೇವಲ ..., ಜನಾಂಗ, ಜಾತಿ, ಲಿಂಗ, ಜನ್ಮಸ್ಥಳ ...ಾ ಇದಾವುದೇ ಆಧಾರದಲ್ಲಿ ...ೀಕರಲ್ಲಿ ತಾರತಮ್ಯವನ್ನು ರಾಷ್ಟ್ರ (ರಾಜ್ಯ) ...ಬಾರದೆಂಬುದು.

...ರಿಚ್ಛೇದ 16 ಒದಗಿಸುವ ಮೂಲಭೂತ ...ೆಂದರೆ ಹಿಂದುಳಿದ ವರ್ಗಗಳಿಗಿರುವ ...ಲಾತಿಯನ್ನು ಹೊರತುಪಡಿಸಿ ...್ಯೋಗ ಅಥವಾ ಪ್ರಭುತ್ವದಡಿಯ ...ುದೇ ಕಛೇರಿಗೆ ನೇಮಕಾತಿ ಮಾಡುವ ...ರಕ್ಕೆ ಸಂಬಂಧಪಟ್ಟಂತೆ ಎಲ್ಲಾ ...ೀಕರಿಗೂ ಸಮಾನ ಅವಕಾಶಗಳಿರ... ಮತ್ತು ಧರ್ಮ, ಜನಾಂಗ, ಜಾತಿ, ... ಹುಟ್ಟು, ಜನ್ಮಸ್ಥಳ, ವಾಸಸ್ಥಳ ಅಥವಾ ...ುದೇ ಆಧಾರದಲ್ಲಿ ತಾರತಮ್ಯವಿರ... ...ೆಂಬುದು.

...ವಿಧಾನದ ಈ ಮೇಲಿನ ಮೂರು ...ೇದಗಳಲ್ಲಿ ಭಾರತದ ನಾಗರೀಕರಿಗೆ ...ಮಾಡಿರುವ ಹಕ್ಕುಗಳು ಸಮಾನತೆಯ ...ಲಭೂತ ಹಕ್ಕುಗಳು. ಯಾವುದೇ ...ೀಕರ ಈ ಮೂಲಭೂತ ಹಕ್ಕುಗಳನ್ನು ...್ಛೇದಗಳಲ್ಲಿ ವಿವರಿಸಲ್ಪಟ್ಟಿರುವಂತೆ ...ತುಪಡಿಸಿ ಸರ್ಕಾರವಾಗಲಿ ಅಥವಾ ... ಯಾವುದೇ ನಾಗರಿಕರಾಗಲಿ ...್ಬರಿಂದ ಕಸಿಯುವಂತಿಲ್ಲ. ಹೀಗಾಗಿ ...ಂದ 16 ರವರೆಗಿನ ಪರಿಚ್ಛೇದಗಳು ...ೀಹವಾಗಿ ಸ್ಪಷ್ಟಪಡಿಸುವ ಅಂಶವೆಂದರೆ ...ಳ ಅಥವಾ ವಾಸಸ್ಥಳದ ಆಧಾರದಲ್ಲಿ ...ುದೇ ನಾಗರೀಕರಲ್ಲಿ ಭೇದ ...ುವಂತಿಲ್ಲ ಎಂಬುದಾಗಿದೆ.

...್ರಾಮಾಂತರ ಕೃಪಾಂಕವು ಗ್ರಾಮಾಂತರ ...ರ್ಗಗಳಿಗೆ ಶೇ.10 ರಷ್ಟು ಕೃಪಾಂಕವನ್ನು ...ುವುದರಿಂದ, ಅದು ನಗರದ ಹಾಗೂ ...ಾಂತರದ ಅಭ್ಯರ್ಥಿಗಳ ಮಧ್ಯೆ ...ತಮ್ಯವನ್ನುಂಟುಮಾಡುತ್ತದೆ, ಆದ... ಅದು ಪರಿಚ್ಛೇದ 14 ರಿಂದ 16'ರ ...ಂಘನೆಯಾಗಿದೆ ಎಂದು ...ಾಲಯಗಳು ತೀರ್ಪಿತ್ತಿವೆ.



ಸಮಸ್ಯೆ ಬಂದಿದ್ದು ನಮ್ಮ ತಪ್ಪಿನಿಂದಾಗಿ ಅಲ್ಲ, ಶೇಖಡವಾರು ಎಷ್ಟಿರಬೇಕೆಂದು ನಿಖರತೆ ಕೆ.ಸಿ.ಎಸ್. ಆಕ್ಟ್‌ನಲ್ಲಿರಲಿಲ್ಲ, ಗ್ರಾಮೀಣ ಎಂದರೆ ಏನು ಎಂದು ಸರಿಯಾದ ಸಮರ್ಥನೆ ಇರಲಿಲ್ಲ. ಕ್ಲಾಸ್ ಸಿ ಮತ್ತು ಕ್ಲಾಸ್ 'ಬಿ' ಯನ್ನು ಸರಿಯಾಗಿ ವಿಸ್ತರಿಸಲಿಲ್ಲ. ಎಷ್ಟು ಅಂಕ, ಆಧಾರವೇನು? ವೈಜ್ಞಾನಿಕ ಮಾನದಂಡ ಅಳವಡಿಸಲಿಲ್ಲ ನಿಖರತೆಯಿಲ್ಲದೆ ಪದೇ ಪದೇ ಸಂಖ್ಯೆ ವಿಸ್ತರಣೆ ಮಾಡಿದ್ದು ತಪ್ಪಾಯಿತು. 2000 ಅಂಕಗಳಿಗೆ ಪರೀಕ್ಷೆ ನಡೆದರೆ, ಗ್ರಾಮೀಣ ಅಭ್ಯರ್ಥಿ 200 ಅಂಕಗಳನ್ನು ಜೇಬಿನಲ್ಲಿಟ್ಟುಕೊಂಡೇ ಪರೀಕ್ಷೆಗೆ ಹಾಜರಾಗುತ್ತಾನೆ. ಇದು ಪ್ರಶ್ನಾರ್ಹವಾಗಿದೆ.

ಡಿ.ಬಿ.ಚಂದ್ರೇಗೌಡ
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ಸಭೆಯಲ್ಲಿ ಹೊರಹೊಮ್ಮಿದ ಅಭಿಪ್ರಾಯಗಳು.......

ಇವತ್ತು ಗ್ರಾಮೀಣ ಪ್ರದೇಶದಲ್ಲಿ ಬಡತನ ಹಂಚಿಕೆಯಾಗುತ್ತಿದೆಯೇ ವಿನಃ ಸಿರಿತನ ಹಂಚಿಕೆಯಾಗುತ್ತಿಲ್ಲ, ಕೃಪಾಂಕ ಇದು ರಾಜ್ಯಾಂಗಬದ್ಧವಾಗಿಲ್ಲ ಎನ್ನುವುದು ಅರ್ಥಹೀನವಾದ.

ಸಿ.ಬೈರೇಗೌಡ
ಎಬಿಜೆಡಿ ರಾಜ್ಯ ಅಧ್ಯಕ್ಷ

★ ★ ★

ನ್ಯಾಯಾಲಯವನ್ನು ಪ್ರಶ್ನಿಸಿ ಪ್ರಯೋಜನವಿಲ್ಲ ಸಂವಿಧಾನಕ್ಕೆ ತಿದ್ದುಪಡಿ ತರಲು ಮುಂದಾಗಬೇಕು. ನಾನು ಬಿಜೆಪಿಯಲ್ಲಿ ಚರ್ಚೆ ಮಾಡಿದ್ದೇನೆ. ಈ ಬೇಡಿಕೆ ಎಲ್ಲಾ ರಾಜ್ಯಗಳಿಂದಲೂ ಮಂಡಿಸಲ್ಪಡಬೇಕು.

ರಾಮಚಂದ್ರಗೌಡ ಬಿಜೆಪಿ
ರಾಷ್ಟ್ರೀಯ ಕಾರ್ಯಕಾರಿಣಿ ಸಮಿತಿ ಸದಸ್ಯರು

★ ★ ★

ಇಲ್ಲಿಯವರೆಗೂ ಹಳ್ಳಿಗಳಲ್ಲಿನ ಶಾಲ, ಕಾಲೇಜುಗಳಿಗೆ ಲೈಬ್ರರಿ, ಲ್ಯಾಬೊರೇಟರಿ ಯಾಕೆ ಮಾಡಿಲ್ಲ ದೇಶದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಖಾಸಗೀಯವರಿಗೆ ವಹಿಸುವ ಮಾತನ್ನು ಡಬ್ಲ್ಯು.ಟಿ.ಒ ಗೆ ಕೊಟ್ಟು, ಇಲ್ಲಿ ಕೃಪಾಂಕದ ಚರ್ಚೆಗೆ ಕೂತಿರುವುದು ವಿಚಿತ್ರ, ಈಗಲಾದರೂ ಆಳುವ ವರ್ಗದ ಪ್ರತಿನಿಧಿಗಳು ತಮ್ಮ ನೋವನ್ನು ಒಪ್ಪಿಕೊಂಡಿರುವುದು ಸಂತೋಷದ ವಿಚಾರ.

ಡಾ.ಜಿ.ರಾಮಕೃಷ್ಣ
ಶಿಕ್ಷಣ ತಜ್ಞರು

★ ★ ★

ಪ್ರತಿಭೆಗೆ ಗಮನಕೊಡುವುದು ಒಪ್ಪುವ ಮಾತೆ. ಆದರೆ ಪ್ರತಿಭೆ ಬೆಳಗಲು ಅವಕಾಶ ಕೊಡುವ ವಾತಾವರಣ ಬೇಕು. ಇದನ್ನು ನಿವಾರಿಸಬೇಕು. ಅದು ಪೂರ್ಣ ನಿವಾರಣೆಯಾಗಿಲ್ಲ ಎನ್ನುವ ಆರಾಳದ ಆಧಾರದಲ್ಲಿ ಸಾಮಾಜಿಕ ನ್ಯಾಯದ ಪ್ರಶ್ನೆಯಾಗಿ ಕೃಪಾಂಕ ಬೇಕಾಗುತ್ತದೆ.

ಜಿ.ಎನ್.ನಾಗರಾಜ್
ಸಿ.ಪಿ.ಐ(ಎಂ) ರಾಜ್ಯ ಕಾರ್ಯದರ್ಶಿ

★ ★ ★

ಕೃಪಾಂಕ ಮಸೂದೆಯನ್ನು ಶಾಶ್ವತ ಮಾಡದೇ ಹೋದದ್ದು ಈ ಪರಿಸ್ಥಿತಿಗೆ ಕಾರಣ. ತಿದ್ದುಪಡಿಗಳಿಲ್ಲದೆ ತರಬಹುದಾದ ಬದಲಾವಣೆಗಳ ಕುರಿತಾಗಿಯೂ ಯೋಚಿಸಬಹುದು.

ಎಂ.ಸಿ.ನರಸಿಂಹನ್
ಸಿ.ಪಿ.ಐ ಮುಖಂಡರು

★ ★ ★

ಅತಂತ್ರರಾಗಿರುವ ನೌಕರರ ಬದುಕನ್ನು ರಕ್ಷಿಸಲು ಎಲ್ಲಿಲ್ಲದ ಸಂಘಟಿತ ಪ್ರಯತ್ನ ಅಗತ್ಯ ಇದಕ್ಕೆ ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟ ಬದ್ಧವಾಗಿದೆ.

ಯು.ಡಿ.ನರಸಿಂಹಯ್ಯ
ನೌಕರರ ಒಕ್ಕೂಟದ ಅಧ್ಯಕ್ಷರು

★ ★ ★

ಶೇ. 65 ರಷ್ಟು ಜನರು ಗ್ರಾಮಾಂತರದಲ್ಲಿದ್ದಾರೆ. ಶೇ.35 ರಷ್ಟು ಜನರು ನಗರದವರು. ಎಲ್ಲರಿಗೂ ಸಮಾನ ಅವಕಾಶಗಳಿರಬೇಕು ಎಂಬ ತಾತ್ವಿಕ ಪ್ರಶ್ನೆಯನ್ನು ಒಪ್ಪಬೇಕಾದರೂ, ತಕ್ಷಣ ಎದುರಾಗಿರುವ ಬಿಕ್ಕಟ್ಟನ್ನು ಬಗೆಹರಿಸಿಕೊಳ್ಳಬೇಕು. ಕಾನೂನು ಪಂಡಿತರು ವಾದ ಮಂಡಿಸಿರುವುದನ್ನು ನೋಡಿದರೆ ಬದ್ಧತೆ ಕೊರತೆ ಎದ್ದು ಕಂಡಿದೆ. ಇದು ರಾಜ್ಯದ ಪ್ರಶ್ನೆ ಮಾತ್ರವಲ್ಲ ರಾಷ್ಟ್ರದ ಪ್ರಶ್ನೆ. ಎಲ್ಲರೂ ಕೂತು ಚಿಂತನೆ ನಡೆಸಿ ಬದ್ಧತೆ ಪ್ರದರ್ಶಿಸಬೇಕು.

ಸಿ.ನಾರಾಯಣಸ್ವಾಮಿ
ಜೆ.ಡಿ(ಎಸ್) ಮಹಾಪ್ರಧಾನ ಕಾರ್ಯದರ್ಶಿ

★ ★ ★

★ ★ ★

ಗ್ರಾಮೀಣ, ನಗರದ ಅಂತರವ ಕುರಿತು ಗಂಭೀರ ಆಲೋಚನೆ ನಡೆಸಬೇಕು ಇದು ಇಂದಿನ ಸಮಸ್ಯೆಯಲ್ಲ ನಗರಗಳು ಇಂಗ್ಲಿಷ್ ಮಾಧ್ಯಮವಾಗಿ ಗ್ರಾಮೀಣ ಪ್ರದೇಶಗಳು ಕನ್ನಡ ಮಾಧ್ಯಮವಾಗಿ ಪರಿವರ್ತಿತವಾಗುತ್ತಿವೆ.

ಡಾ.ಎಲ್.ಹನುಮಂತಯ್ಯ
ಶಾಸಕರು

★ ★ ★

ಅಂಗನವಾಡಿಯ ಸಹಾಯಕಿಯಾಗಿ ದಲಿತ ಮಹಿಳೆಯರನ್ನು ನೇಮಿಸಿದರೆ ಮೇಲ್ಜಾತಿಯವರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವುದೇ ಇಲ್ಲ.



13,500 ನೌಕರರ ಪರವಾಗಿ ಯೋಚಿಸುವುದು ಮೊದಲ ಪ್ರಶ್ನೆ. ಸರ್ಕಾರ ಅವರನ್ನು ಕೈಬಿಡಬಾರದು ಅದು ಗ್ಯಾರಂಟಿಯಾಗಬೇಕು. ಕೃಪಾಂಕ ಶಾಶ್ವತ ಪರಿಹಾರವಲ್ಲ. ಕೆಲಸದ ಹಕ್ಕು ಮೂಲಭೂತ ಹಕ್ಕಾಗಬೇಕು. ಇಲ್ಲವೇ ಪರಿಹಾರ ಸಿಗಬೇಕು.

ವಿ.ಜೆ.ಕೆ. ನಾಯರ್
ಸಿ.ಐ.ಟಿ. ಯು ಪ್ರಧಾನ ಕಾರ್ಯದರ್ಶಿ

ಈಗಲೂ ದೇವಸ್ಥಾನಗಳಿಗೆ ಪ್ರವೇಶವಿಲ್ಲ. ಎಲ್ಲಿಯವರೆಗೂ ಅಸಮಾನತೆ ಇರುತ್ತದೆಯೋ ಅಲ್ಲಿಯವರೆಗೂ ಗ್ರಾಮೀಣ ಕೃಪಾಂಕ, ಮೀಸಲಾತಿ ಬೇಕು.

ಪಿ.ಜಿ.ಆರ್.ಸಿಂಧ್ಯಾ
ಜೆ.ಡಿ(ಯು)
ಶಾಸಕಾಂಗ ಪಕ್ಷದ ಮುಖಂಡರು


ಮನುಷ್ಯರಲ್ಲಿ ಒಂದು ವರ್ಗದವರು ಸಂಪತ್ತು ಗಳಿಸಬಾರದು, ಅವಿದ್ಯಾವಂತರು ಹಾಗೇ ಉಳಿಯಬೇಕು, ಬಡವರು ಬಡತನದಲ್ಲೇ ಐಶ್ವರ್ಯ ಕಾಣಬೇಕು ಎಂದೆಲ್ಲಾ ಪ್ರಲಕ್ಷಿಸುವ ಅವೈಜ್ಞಾನಿಕ ಶಿಕ್ಷಣ ಒಂದು ಕಡೆಯಾದರೆ, ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ಹೆಸರಿನೊಡನೆ ಮಹಾ ಮಹಾ ಪದವಿಗಳನ್ನು ಅಂಟಿಸಿಕೊಂಡು ಅಡ್ಡಾಡುವ ಅಸಂಖ್ಯಾತ ವಿದ್ಯಾವಂತ ಗಂಡಸರು, ಹೆಂಗಸರು ಸಹ ದೇವಾನುದೇವತೆಗಳೆಂಬ ನಿತ್ಯ ಭ್ರಮೆ, ಅವಿವೇಕ ಮತ್ತು ಅಜ್ಞಾನದ ಭಾವನೆಗಳಲ್ಲೇ ಮುಳುಗಿ ಹೋಗುವಂತ ಶಿಕ್ಷಣ. ಜನತೆಯಲ್ಲಿ ಪಶುತ್ವ, ಪ್ರಾಂತೀಯತೆಯನ್ನು ಉದ್ರೇಕಿಸುತ್ತ ದೇಶದೊಳಗಿನ ಹರಿದುತಿನ್ನುವ ಬಡತನ, ಅಜ್ಞಾನ, ಅನಕ್ಷರತೆ, ಸೋಮಾರಿತನಗಳನ್ನೇ ವೈಭವದ ಪಲ್ಲಕ್ಕಿಯ ಮೇಲೆ ಮೆರೆಸಿದೆಯೋ ಅಂಥ ಶಿಕ್ಷಣವನ್ನು ಕಿತ್ತೊಗೆಯಬೇಕು



- ಡಾ|| ಅಂಬೇಡ್ಕರ್
ಶೋಷಿತರ ಜನನಾಯಕ

ಇಲ್ಲಿದೆ ಶಾಶ್ವತ ಪರಿಹಾರ

ಗ್ರಾಮೀಣ ಕೃಪಾಂಕ - ಸಂವಿಧಾನದ 31(ಬಿ) ಅಡಿ ಶಾಸನ ಅಗತ್ಯ



ನ್ಯಾಯಮೂರ್ತಿ ಹೆಚ್.ಜಿ.ಬಾಲಕೃಷ್ಣ

ಗ್ರಾಮೀಣ ಕೃಪಾಂಕದ ಕುರಿತು ಸರ್ವೋಚ್ಚ ನ್ಯಾಯಾಲಯದ ತೀರ್ಪು ನೌಕರರಲ್ಲಿ ತೀವ್ರ ಆತಂಕವನ್ನುಂಟು ಮಾಡಿದೆ. ಮಾತ್ರವಲ್ಲ ಗ್ರಾಮಾಂತರದ ಸಾವಿರಾರು ವಿದ್ಯಾರ್ಥಿ-ಯುವಜನರ ಭವಿಷ್ಯಕ್ಕೆ ಬೆದರಿಕೆ ಒಡ್ಡಿದೆ. ನೌಕರರ ಭವಿಷ್ಯ ಕಾಯುವಾಗಲೇ ಕೃಪಾಂಕದ ನೀತಿಯನ್ನು ರಕ್ಷಿಸಿಕೊಳ್ಳಬೇಕು. ಹಾಗಾದರೆ ಮಾಡಬೇಕಾದುದೇನು? ಈ ಬಗ್ಗೆ ಗೌರವಾನ್ವಿತ ಹೈಕೋರ್ಟ್ ನ್ಯಾಯಮೂರ್ತಿಗಳಾದ ಹೆಚ್.ಜಿ.ಬಾಲಕೃಷ್ಣರವರು ಪರಿಹಾರ ಸೂಚಿಸಿದ್ದಾರೆ. ಏನದು?

ರಾಷ್ಟ್ರದ ಬಹುಸಂಖ್ಯಾತ ಜನಸಂಖ್ಯೆ ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿರುವಾಗ ಹಾಗೂ ರಾಷ್ಟ್ರದ ಆರ್ಥಿಕ ಸುಭದ್ರತೆ ಕೃಷಿ ಆಧಾರಿತ ಆರ್ಥಿಕತೆ ಮೇಲೆ ಅವಲಂಬಿತವಾಗಿರುವಾಗಲೇ ಗ್ರಾಮಾಂತರ ಪ್ರದೇಶಗಳಲ್ಲಿ ಲಭ್ಯವಿರದ ನಗರ ಕೇಂದ್ರಿತ ಸೌಲಭ್ಯಗಳು, ಗ್ರಾಮೀಣ ಅಭ್ಯರ್ಥಿಗಳ ಪ್ರಗತಿ ಹಾಗೂ ಬೆಳವಣಿಗೆಗೆ ಅಡ್ಡಿಯುಂಟು ಮಾಡುತ್ತಿರುವ ಅಲ್ಲಿನ ಸಾಮಾಜಿಕ, ಶೈಕ್ಷಣಿಕ ಆರ್ಥಿಕ ಹಾಗೂ ರಾಜಕೀಯ ಅಂಗವೈಕಲ್ಯಗಳು, ಮತ್ತು ಸರ್ಕಾರಿ ಸೇವೆಗಳಲ್ಲಿ ಸೂಕ್ತ ಪ್ರಾತಿನಿಧ್ಯ ಪಡೆಯದ ಗ್ರಾಮೀಣ ಪ್ರತಿಭೆಗಳನ್ನು ಗಮನದಲ್ಲಿರಿಸಿ ಅತ್ಯಾಧಿಕ ಜನತೆಯ ಅತ್ಯಾಧಿಕ ಒಳಿತನ್ನು ಆಶಿಸಿ ಸಂವಿಧಾನದ 9 ನೇ ಶೆಡ್ಯೂಲಿನಡಿ, ಪರಿಚ್ಛೇದ 31(ಬಿ) ಖಾತ್ರಿಪಡಿಸಿರುವ ರಕ್ಷಣೆಯನ್ನು ಬಳಸಿ ಸೂಕ್ತ ಶಾಸನವನ್ನು ರೂಪಿಸುವುದು ಇಂದಿನ ಅಗತ್ಯ ಹಾಗೂ ಸಂವಿಧಾನಿಕ ಅನಿವಾರ್ಯತೆಯಾಗಿದೆ.

9ನೇ ಶೆಡ್ಯೂಲಿಗೆ ಸೇರಿಸಬೇಕಾದ ಉದ್ದೇಶಿತ ಶಾಸನವನ್ನು **"ಕರ್ನಾಟಕ ಗ್ರಾಮೀಣ ಕೃಪಾಂಕ ಅಧಿನಿಯಮ-2003"** ಎಂದು ಕರೆಯಬಹುದು.

ಸಾಮಾಜಿಕ ಕಲ್ಯಾಣ ಆಧಾರಿತ ಅನೇಕ ಶಾಸನಗಳನ್ನು ಈಗಾಗಲೇ 9ನೇ ಶೆಡ್ಯೂಲ್‌ನಲ್ಲಿ ಸೇರಿಸಲಾಗಿರುವ ಕಾರಣ ಮತ್ತೊಂದು ಶಾಸನವನ್ನು ಅದಕ್ಕೆ ಸೇರಿಸಲು ಯಾವುದೇ ಕಾನೂನಿನ ಅಡ್ಡಿಯಿಲ್ಲ.

ಪರಿಚ್ಛೇಧ 31(ಬಿ) ಯನ್ನು 1951 ರಿಂದ ತಿದ್ದುಪಡಿ ಮಾಡದಿದ್ದರೂ, 9ನೇ ಶೆಡ್ಯೂಲ್‌ನ್ನು ಅನೇಕ ಬಾರಿ ತಿದ್ದುಪಡಿ ಮಾಡಲಾಗಿದೆ. ಪರಿಣಾಮವಾಗಿ ಕೇವಲ 13 ಶಾಸನಗಳು 1951 ರಲ್ಲಿ ಸದರಿ ಶೆಡ್ಯೂಲಿನಡಿ ರಕ್ಷಣೆ ಪಡೆದಿದ್ದರೆ 1984' ರ ಸಂವಿಧಾನ (47 ನೇ ತಿದ್ದುಪಡಿ) ಅಧಿನಿಯಮದ ನಂತರ 1984 ರಲ್ಲಿ 202 ಶಾಸನಗಳಿಗೆ ಏರಿದೆ. ಸುಪ್ರಿಂ ಕೋರ್ಟ್ ತನ್ನ ಒಂದು ತೀರ್ಪಿನಲ್ಲಿ (ಜಗನ್ನಾಥ್ ಮತ್ತು ಭಾರತ ಸರ್ಕಾರ) ಈ ಕೆಳಗಿನಂತೆ ತೀರ್ಪು ನೀಡಿದೆ:

"ಪರಿಚ್ಛೇದ 31-ಬಿ ಹೇಳುವಂತೆ 9ನೇ ಶೆಡ್ಯೂಲಿಗೆ ಯಾವುದೇ ಶಾಸನವನ್ನು ಸೇರಿಸಲ್ಪಡುವುದರ ಪರಿಣಾಮ ಎಂದರೆ ಅಂಥಹ ಅಧಿನಿದಿಯಮವು ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂಬ ಕಾರಣದಿಂದ ಎಂದಿಗೂ ಸಹಾ ಅಸಿಂಧುಗೊಳ್ಳುವುದಿಲ್ಲ ಎಂದು ಭಾವಿಸತಕ್ಕದ್ದು. ಪರಿಣಾಮವಾಗಿ ಈ ಕಾರಣದಿಂದ ಅಸಿಂಧು ಎಂದು ನ್ಯಾಯಾಲಯದಿಂದ ಘೋಷಿಸಲ್ಪಡುವ ಶಾಸನದ, 9ನೇ ಶೆಡ್ಯೂಲಿಗೆ ಸೇರ್ಪಡೆಯಿಂದಾಗಿ ನ್ಯಾಯಾಲಯದ ತೀರ್ಪು ಪರಿಣಾಮ ಬೀರದು ಹಾಗೂ ಸೇರ್ಪಡೆಯಾದ ಅಧಿನಿಯಮಕ್ಕೆ ಅಂಗೀಕಾರಗೊಂಡ ದಿನಾಂಕದಿಂದ ಪೂರ್ವಾನ್ವಯಗೊಂಡಂತೆ ಮಾನ್ಯತೆ ದೊರೆಯುತ್ತದೆ."

ಪರಿಚ್ಛೇದ 31-ಬಿ ಸ್ವತಃ ಸಂವಿಧಾನದ ಮೂಲಭೂತ ಲಕ್ಷಣಗಳ ಪರೀಕ್ಷೆಯಿಂದ ಹೊರಗುಳಿದಿದ್ದರೂ ಸಹಾ, 24-4-1973' ರ ನಂತರ 9ನೇ ಶೆಡ್ಯೂಲಿಗೆ ತರಲಾಗುವ ಯಾವುದೇ ತಿದ್ದುಪಡಿಯನ್ನು ಸಂವಿಧಾನದ ಮೂಲಭೂತ ಲಕ್ಷಣಗಳ ಮೇಲೆ ಮಾತ್ರ ಪ್ರಶ್ನಿಸಬಹುದಾಗಿದೆ. ಅಂತಹ ಶಾಸನಗಳು ಸಂವಿಧಾನದ ಮೂಲಭೂತ ಸಂರಚನೆಯನ್ನು ಹಾಳುಗೆಡವದಿದ್ದರೆ ಅಥವಾ ಅದಕ್ಕೆ ಚ್ಯುತಿ ತರದಿದ್ದರೆ ಸಿಂಧುತ್ವ ಪಡೆಯುತ್ತವೆ. ಗ್ರಾಮೀಣ ಕೃಪಾಂಕ ಕಾಯ್ದೆಯ ಉದ್ದೇಶ ಸಂವಿಧಾನದ ಮೂಲಭೂತ ಸಂರಚನೆಯನ್ನು ಉಲ್ಲಂಘಿಸುವುದಿಲ್ಲ ಮಾತ್ರವಲ್ಲದೆ ಅದರೊಂದಿಗೆ ಪೈಪೋಟಿಗೂ ಇಳಿಯುವುದಿಲ್ಲ. ಬದಲಿಗೆ ಸಂವಿಧಾನಾತ್ಮಕ ಉದ್ದೇಶಗಳಾದ ಸಾಮಾಜಿಕ ನ್ಯಾಯ, ಕಲ್ಯಾಣ ರಾಜ್ಯ, ಸಮಾನತಾ ವ್ಯವಸ್ಥೆ ಮತ್ತು ಸಮಾಜವಾದಿ ಅಂಶಗಳನ್ನು ಪೂರೈಸುವುದಾಗಿದೆ.

13,270 ನೌಕರರನ್ನು ಸೇವೆಯಿಂದ ತೆರವುಗೊಳಿಸಿ ಅವರ ಕುಟುಂಬಗಳನ್ನು ಅತಂತ್ರಕ್ಕೊಳಪಡಿಸಿ ಮಾನವೀಯ ಮೌಲ್ಯಗಳನ್ನು ಲೆಕ್ಕಿಸದೆ ಉದ್ಯೋಗರಹಿತರನ್ನಾಗಿಸಿ, ಆಂತರಿಕವಾಗಿ ನಿರ್ವಸತಿಗರನ್ನಾಗಿಸುವ ಹಂತಕ್ಕೆ ದೂಡುವುದು ಸಂವಿಧಾನದ ಮೂಲ ಆಶಯಕ್ಕೆ ವ್ಯತಿರಿಕ್ತವಾಗಿದೆ ಮಾತ್ರವಲ್ಲದೆ ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ವಿರೋಧವಾಗಿದೆ.

ಪರಿಚ್ಛೇದ 31-ಬಿ, ಪರಿಚ್ಛೇದ 31-ಎ ಯಿಂದ ಸ್ವತಂತ್ರವಾದದ್ದು ಹಾಗೂ ಸಂವಿಧಾನಕ್ಕೆ 1951 ರಲ್ಲಿ ತರಲಾದ ಮೊದಲ ತಿದ್ದುಪಡಿಯಾದ ಸಂವಿಧಾನ ಕಾಯ್ದೆ -1951' ರ ಕಲಂ 5' ರ ಮೂಲಕ ಸೇರಿಸಲ್ಪಟ್ಟದ್ದು. ತಿದ್ದುಪಡಿಯ ಪರಿಣಾಮ ಎಂದರೆ ಅದು ಪೂರ್ವಾನ್ವಯ ಪರಿಣಾಮವನ್ನು ಹೊಂದಿತ್ತು ಹಾಗೂ 9ನೇ ಶೆಡ್ಯೂಲಿನಲ್ಲಿ ಸೇರಿಸಲ್ಪಟ್ಟಿದ್ದ ಶಾಸನಗಳನ್ನು ಪ್ರಾರಂಭದಿಂದಲೂ, ಶಾಸನ ಮಾಡುವಾಗ ಅದು ಆರಂಭದಲ್ಲಿ 1935' ರ ಭಾರತ ಸರ್ಕಾರ ಅಧಿನಿಯಮದ ಕಲಂ 299 ಅನ್ನು ಉಲ್ಲಂಘಿಸಿದರೂ ಸಹಾ ಸಿಂಧುತ್ವ ಪಡೆದವು.

ಪರಿಚ್ಛೇಧ 31-ಬಿ ಪೂರ್ವಾನ್ವಯ ಪರಿಣಾಮ ಹೊಂದಿದ್ದು, ಸಂವಿಧಾನ ತಿದ್ದುಪಡಿಯ ಮೂಲಕ 9ನೇ ಶೆಡ್ಯೂಲಿನಲ್ಲಿ ಸೇರಿಸಲ್ಪಡುವ ಶಾಸನಗಳನ್ನು ಪೂರ್ವಾನ್ವಯ ಪ್ರಭಾವದೊಂದಿಗೆ ಸಂರಕ್ಷಿಸುತ್ತದೆ. ಆ ರೀತಿ ಸೇರಿಸಲ್ಪಟ್ಟಲ್ಲಿ ಹಿಂದಿನ ನ್ಯಾಯಾಂಗ ತೀರ್ಪಿನ ಮೂಲಕ ಸಂವಿಧಾನ ಬಾಹಿರ ಎಂದು ತೀರ್ಮಾನಿಸಲ್ಪಟ್ಟಿದ್ದರೂ ಸಹಾ ಪೂರ್ವಾನ್ವಯ ಪ್ರಭಾವದಿಂದಾಗಿ ಸಿಂಧುತ್ವ ಪಡೆಯುತ್ತದೆ ಮಾತ್ರವಲ್ಲದೆ ಶಾಸನ ಸಭೆಯಿಂದ ಅಧಿನಿಯಮದ ಮರು ಅಂಗೀಕಾರ ಅಗತ್ಯವಿಲ್ಲ.

ಯಾವುದೇ ಮೂಲಭೂತ ಹಕ್ಕನ್ನು ಉಲ್ಲಂಘಿಸುತ್ತದೆ ಎಂದು ಯಾವುದೇ ಶಾಸನವನ್ನು ಯಾವುದೇ ನ್ಯಾಯಾಲಯ ಅಥವಾ ನ್ಯಾಯಮಂಡಳಿಯ ತೀರ್ಪಿನಿಂದ 9ನೇ ಶೆಡ್ಯೂಲಿನಲ್ಲಿ ಸೇರಿಸಲ್ಪಟ್ಟ ನಿರ್ದಿ[illegible] ಅಧಿನಿಯಮವನ್ನು ಸಂರಕ್ಷಿಸು[illegible] ಉದ್ದೇಶದೊಂದಿಗೆ ಅತ್ಯಂತ ಎಚ್ಚರಿಕೆಯೊಂದಿ[illegible] ಸಂವಿಧಾನಕ್ಕೆ ಪರಿಚ್ಛೇಧ 31-ಬಿ ಯನ್ನು ಸೇರಿಸಲಾಗಿದೆ.

ಪರಿಚ್ಛೇಧ 31-ಬಿ ಯ ರಕ್ಷಣೆ[illegible] ಪಡೆಯುವುದಕ್ಕಾಗಿ ಪ್ರಶ್ನಿತ ಅಧಿನಿಯಮ[illegible] ಕಾರ್ಷಿಕ ಸುಧಾರಣೆಗೆ ಸಂಬಂಧಿಸಿದ್ದೆಂದುಬೇ[illegible] ತೋರಿಸಬೇಕಿಲ್ಲ. 9ನೇ ಶೆಡ್ಯೂಲ್‌[illegible] ಸೇರಿಸಲ್ಪಟ್ಟಿರುವ ಶಾಸನಗಳಲ್ಲಿ ಕರ್ನಾಟ[illegible] ಭೂಸುಧಾರಣಾ ಕಾಯ್ದೆ ಸಹಾ ಒಂದು. 199[illegible] ರವರೆಗೆ ಪರಿಚ್ಛೇಧ 31-ಬಿ ಅಡಿಯಲ್ಲಿ 9ನೆ[illegible] ಶೆಡ್ಯೂಲ್ ವ್ಯಾಪ್ತಿಯಲ್ಲಿ 284 ಶಾಸನಗಳಿವ[illegible] ಶಾಶ್ವತ ಪರಿಹಾರಕ್ಕಾಗಿ ಸೂಚಿತ ಪರಿಹಾ[illegible] ಸಂವಿಧಾನಿಕ ಅನಿವಾರ್ಯ ಮಾತ್ರವಲ್ಲ[illegible] ಕಾರ್ಯಸಾಧುವಾಗಿದ್ದು ಹಾಗೂ ತುರ್ತು ಗಮ[illegible] ನೀಡಬೇಕಾದ ವಿಷಯವಾಗಿದೆ.

13270 ನೌಕರರನ್ನು ಸೇವೆಯಿಂ[illegible] ತೆರವುಗೊಳಿಸಿ ಅವರ ಕುಟುಂಬಗಳ[illegible] ಅತಂತ್ರಕ್ಕೊಳಪಡಿಸಿ ಮಾನವೀಯ ಮೌಲ್ಯಗಳ[illegible] ಲೆಕ್ಕಿಸದೆ ಉದ್ಯೋಗರಹಿತರನ್ನಾಗಿ[illegible] ಆಂತರಿಕವಾಗಿ ನಿರ್ವಸತಿಗರನ್ನಾಗಿಸುವ ಹ[illegible] ದೂಡುವುದು ಸಂವಿಧಾನದ ಮೂಲ ಆಶಯ[illegible] ವ್ಯತಿರಿಕ್ತವಾಗಿದೆ ಮಾತ್ರವಲ್ಲದೆ ಸಾಮಾಜ[illegible] ನ್ಯಾಯದ ಪರಿಕಲ್ಪನೆಗೆ ವಿರೋಧವಾಗಿದೆ.



ಗ್ರಾಮಾಂತರ ವಿದ್ಯಾರ್ಥಿಯೊಬ್ಬನ ಚಿತ್ರ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH